# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY
ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038


ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ
No.1 Leading in Local News Paper
80,000
HAMPI TIMES E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201

ಸಂಪುಟ:02 • ಸಂಚಿಕೆ: 38 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 03.08.2024 • ಶನಿವಾರ • ಪುಟ:04 • ಬೆಲೆ:2
Volume:02 • Issue: 38 • PRGI No:KARKAN/2023/88055 • VIJAYANAGARA • 03.08.2024 • Saturday • Page:04 • Rs:2

ಮನಸ್ಸು ಮಾಡು ಕರ್ತವ್ಯ ನಿಷ್ಠನಾಗು ಕಾದು ನೋಡು
ಪುಟ: 4ರಲ್ಲಿ ನೋಡಿ

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು
ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...
94486 33038 www.hampitimes.com / epaper.hampitimes.com Vijayanagara hampitimes@gmail.com
ಹಂಪಿ ಟೈಮ್ಸ್ ಇ-ಪೇಪರ್

**ಒಳ ಪುಟಗಳಲ್ಲಿ**

**ಮದುವೆಯ ಮಮತೆಯ ಕರೆಯೋಲೆ : ಒಂದು ಪ್ರಹಸನ**
>> 2ರಲ್ಲಿ
ಲೇಖಕರು: ಡಾ.ಯಲ್ಲಮ್ಮ ಕೆ

**ಜನರ ಪ್ರಾಣ ರಕ್ಷಿಸಿದ ರಿಯಲ್ ಹೀರೋಸ್**
>> 3ರಲ್ಲಿ
ಲೇಖಕರು: ನಂದಿನಿ ಸನಬಾಲ್

**ಮಕ್ಕಳ ಪ್ರತಿ ತಪ್ಪಿಗೂ ತಾಯಿಯನ್ನೆ ದೂಷಿಸುವುದೇಕೆ?**
>> 2ರಲ್ಲಿ
ಲೇಖಕರು: ಅಂಜಲಿ ಶ್ರೀನಿವಾಸ

**ಒಂದು ವೈಭವೋಪೇತ ವಿವಾಹ ಮತ್ತು ಹೆಣ್ಣು ಮಕ್ಕಳ ಅಸ್ಮಿತೆಯ ಕುರಿತಾದ ಮಾತುಗಳು**
>> 3ರಲ್ಲಿ
ಲೇಖಕರು: ವೀಣಾ ಹೇಮಂತಗೌಡ ಪಾಟೀಲ್

# ಎರಡು ಗ್ರಾಪಂಗೊಂದು ಕರ್ನಾಟಕ ಪಬ್ಲಿಕ್ ಶಾಲೆ

## ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿಕೆ | 3ನೇ ಬಾರಿಯೂ ಎಸ್ಸೆಸ್ಸೆಲ್ಸಿ ಫೇಲಾದವರಿಗೆ ರೆಗ್ಯೂಲರ್ ಕ್ಲಾಸಿಗೆ ಅವಕಾಶ

## ಕಲ್ಯಾಣ ಕರ್ನಾಟಕ ಭಾಗದ ಶೈಕ್ಷಣಿಕ ಅಭಿವೃದ್ಧಿಗೆ ಕೆಕೆಆರ್‌ಡಿಬಿಯಿಂದ ಶೇ.25ರಷ್ಟು ಅನುದಾನ ಮೀಸಲು

## 3 ಸಾವಿರ ಕೆಪಿ ಶಾಲೆ ಸ್ಥಾಪನೆ | ಈ ಬಾರಿ 600 ಶಾಲೆಗಳನ್ನು ಮೇಲ್ದರ್ಜೆಗೇರಲಿವೆ | ಶಿಕ್ಷಕರ ನೇಮಕಾತಿಗೂ ಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳ ಶೈಕ್ಷಣಿಕ ಅಭಿವೃದ್ಧಿಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಶೇ.25 ರಷ್ಟು ಅನುದಾನ ಮೀಸಲಿರಿಸಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಶಾಲಾ ಶಿಕ್ಷಣ ಇಲಾಖೆ ಕಲಬುರಗಿ ವಿಭಾಗ, ಜೆಎಸ್‌ಡಬ್ಲ್ಯೂ ಫೌಂಡೇಶನ್ ತೋರಣಗಲ್ಲು ಇವರ ಸಂಯುಕ್ತಾಶ್ರಯದಲ್ಲಿ ತೋರಣಗಲ್ಲಿನ ವಿದ್ಯಾನಗರದ ಜೆ-ಮ್ಯಾಕ್ಸ್ ಸಭಾಂಗಣದಲ್ಲಿ ಆಯೋಜಿಸಿದ್ದ 'ಎಜುಕಾನ್-2024' ಎರಡು ದಿನಗಳ ಶೈಕ್ಷಣಿಕ ಸಮಾವೇಶದ ಎರಡನೇ ದಿನದ ಕಾರ್ಯಕ್ರಮ ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಪೂರ್ವ ಪ್ರಾಥಮಿಕ ಶಾಲೆಗಳನ್ನು ಆರಂಭಿಸಲಾಗಿದೆ. ಇದರಿಂದ ಸರ್ಕಾರಿ ಶಾಲೆಗೆ ಬರುವ ಮಕ್ಕಳ ಸಂಖ್ಯೆಯಲ್ಲಿ ಹೆಚ್ಚಳವಾಗಲಿದೆ. ಈಗಾಗಲೇ 42,500 ಅತಿಥಿ ಶಿಕ್ಷಕರನ್ನು ನೇಮಿಸಲಾಗಿದೆ. ಕಕ ವ್ಯಾಪ್ತಿಯಲ್ಲಿ 11,600 ಶಿಕ್ಷಕರನ್ನು ನೇಮಕ ಮಾಡಲಾಗಿದೆ ಎಂದು ಹೇಳಿದರು.



ಕಕ ಭಾಗದಲ್ಲಿ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂದೇಟು ಹಾಕುತ್ತಿದ್ದು, ವಿಷಾಧನೀಯ ಸಂಗತಿಯಾಗಿದೆ. ಶಿಕ್ಷಕರು ವಿದ್ಯಾರ್ಥಿಗಳ ಬರುವಿಕೆಗಾಗಿ ಕಾಯುತ್ತಿದ್ದಾರೆ. ಮಕ್ಕಳನ್ನು ದೇಶದ ಆಸ್ತಿಯನ್ನಾಗಿ ಮಾಡಲು ಪೋಷಕರು ತಪ್ಪದೇ ಶಾಲೆಗಳಿಗೆ ಕಳುಹಿಸಬೇಕು ಎಂದು ಕರೆ ನೀಡಿದ ಅವರು, ಇದರ ಜವಾಬ್ದಾರಿಯನ್ನು ಎಸ್‌ಡಿಎಂಸಿಯವರು ವಹಿಸಬೇಕು ಎಂದು ಹೇಳಿದರು.

**ಸರ್ಕಾರಿ ಕಾಲೇಜಿನಲ್ಲೂ ನೀಟ್, ಸಿಇಟಿ ತರಬೇತಿ:**

ಖಾಸಗಿ ಶಾಲೆಗಳ ವಿದ್ಯಾರ್ಥಿಗಳು ನೀಟ್, ಜೆಇಇ ಮತ್ತಿತರ ಪ್ರವೇಶ ಪರೀಕ್ಷೆಗಳಿಗೆ ಪ್ರತ್ಯೇಕ ಶುಲ್ಕ ಪಾವತಿಸಿ ಕಾಲೇಜು ಹಂತದಲ್ಲೇ ತರಬೇತಿ ಪಡೆಯುತ್ತಾರೆ. ದ್ವಿತೀಯ ಪಿಯು ಉತ್ತೀರ್ಣರಾದ ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗೂ ಕೂಡ ಸಿಇಟಿ, ನೀಟ್ ಸೇರಿದಂತೆ ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಅಗತ್ಯವಾದ ತರಬೇತಿ ನೀಡಲು 25 ಸಾವಿರ ಮಕ್ಕಳಿಗೆ ರಾಜ್ಯ ಸರ್ಕಾರವು ರೂ.12 ಕೋಟಿ ನೀಡಲಾಗಿದೆ >>4

### ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮರು ಪ್ರವೇಶ

ಕಳೆದ ವರ್ಷದಿಂದ ಮೂರು ಪರೀಕ್ಷೆಗಳನ್ನು ಪರಿಚಯಿಸಿದ ಪರಿಣಾಮ ಅನುತ್ತೀರ್ಣತೆಯ ಪ್ರಮಾಣದಲ್ಲಿ ಇಳಿಕೆಯಾಗಿದೆ. ಮೂರೂ ಪರೀಕ್ಷೆಗಳಲ್ಲೂ ತೇರ್ಗಡೆಯಾಗದೆ ಒಂದು ವರ್ಷ ಮನೆಯಲ್ಲೇ ಉಳಿಯುವ ವಿದ್ಯಾರ್ಥಿಗಳಿಗೆ ಮರು ದಾಖಲು ಮಾಡಿಕೊಳ್ಳಲಾಗುತ್ತಿದೆ. ಎಸ್‌ಎಸ್‌ಎಲ್‌ಸಿಗೆ ಮರು ದಾಖಲಾಗುವ ಮಕ್ಕಳಿಗೆ ಇತರೆ ಮಕ್ಕಳಂತೆ ಸಮವಸ್ತ್ರ ಪಠ್ಯಪುಸ್ತಕ ಶೂ, ಸಾಕ್ಸ್ ಮಧ್ಯಾಹ್ನದ ಬಿಸಿಯೂಟ ಸೇರಿ ಎಲ್ಲಾ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದರು

### ವಾರದ 6 ದಿನವೂ ಮೊಟ್ಟೆ ವಿತರಣೆ

ಮಕ್ಕಳಿಗೆ ಮಧ್ಯಾಹ್ನದ ಊಟದ ಜೊತೆಗೆ ವಾರಕ್ಕೆ 2 ದಿನ ಮೊಟ್ಟೆ, ಚಿಕ್ಕಿ ಬಾಳೆಹಣ್ಣು ನೀಡಲಾಗುತ್ತಿತ್ತು. ರಾಜ್ಯದಲ್ಲಿನ ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳಿಗೆ ಇನ್ನು ಮುಂದೆ ವಾರದ 6 ದಿನವೂ ಮೊಟ್ಟೆ ನೀಡಲಾಗುತ್ತದೆ. ಸರ್ಕಾರ ಈಗಾಗಲೇ ವಾರದಲ್ಲಿ 2 ದಿನ ಮೊಟ್ಟೆ ನೀಡುತ್ತಿತ್ತು. ಇದರ ಜತೆಗೆ ಉಳಿದ 4 ದಿನ ಮೊಟ್ಟೆ ನೀಡಲು ಅಜೀಂ ಪ್ರೇಮ್‌ಜೀ ಫೌಂಡೇಷನ್ ಮುಂದೆ ಬಂದಿದ್ದು, ವಾರದ ಎಲ್ಲಾ ದಿನವೂ ಪೂರಕ ಪೌಷ್ಟಿಕ ಆಹಾರ ಲಭಿಸಲಿದೆ. ಎಲ್ಲಾ ಮಕ್ಕಳಿಗೆ ಒಳ್ಳೆಯ ಆಹಾರ ಸಿಗಬೇಕು ಎಂಬುದು ನಮ್ಮ ಸರ್ಕಾರದ ಆಶಯವಾಗಿದೆ ಎಂದು ಸಚಿವರು ತಿಳಿಸಿದರು.



### ನನ್ನ ಶಾಲೆ-ನನ್ನ ಜವಾಬ್ದಾರಿ

ಸರ್ಕಾರಿ ಶಾಲೆಯಲ್ಲಿ ಉಚಿತವಾಗಿ ಓದಿದವರು ಆ ಶಾಲೆಗಳನ್ನು ಮರೆಯದೆ ತಮ್ಮ ಕೈಯಲ್ಲಾದ ಸಹಕಾರ ನೀಡಬೇಕು ಎಂಬ ಉದ್ದೇಶದಿಂದ 'ನನ್ನ ಶಾಲೆ-ನನ್ನ ಜವಾಬ್ದಾರಿ' ಎಂಬ ಯೋಜನೆಯನ್ನು ಆರಂಭಿಸಲಾಗಿದ್ದು, ಹಳೆ ವಿದ್ಯಾರ್ಥಿಗಳನ್ನು ಒಂದುಗೂಡಿಸಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಈ ಕಾರ್ಯಕ್ರಮ ಪೂರಕವಾಗಿದೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು. ವೈಚಾರಿಕತೆ, ವೈಜ್ಞಾನಿಕತೆ ಬೆಳೆಸಿಕೊಳ್ಳಬೇಕು. ಜ್ಞಾನದ ವಿಕಾಸವಾಗಬೇಕು ಎನ್ನುವ ವಿನೂತನ ಚಿಂತನೆಯಿಂದ 'ನನ್ನ ಶಾಲೆ ನನ್ನ ಜವಾಬ್ದಾರಿ' ಹೆಸರಿನ ವಿದ್ಯಾರ್ಥಿಗಳ ಸಂಘ ರಚನೆ ಮಾಡಿ, ವಾಟ್ಸಾಪ್ ಗ್ರೂಪ್‌ಗಳ ಮೂಲಕ ಒಗ್ಗೂಡಿಸಲು ಸಲಹೆ ನೀಡಲಾಗುತ್ತಿದೆ ಎಂದು ಅವರು ತಿಳಿಸಿದರು.

**ಮೈಕ್ರೋ ನ್ಯೂಸ್**

## ಆ.07 ರಂದು ಭಾರತೀಯ ಗುಣಮಟ್ಟದ ಬಗ್ಗೆ ಅರಿವು ಮೂಡಿಸಲು ತರಬೇತಿ

**ಹಂಪಿ ಟೈಮ್ಸ್ ಕೊಪ್ಪಳ**

ಭಾರತ ಸರ್ಕಾರದ ಅಂಗ ಸಂಸ್ಥೆಯಾದ ಭಾರತೀಯ ಮಾನಕ ಬ್ಯೂರೋ(ಬಿಐಎಸ್) ಅವರಿಂದ ಭಾರತೀಯ ಗುಣಮಟ್ಟದ ಕುರಿತು ಅರಿವು ಮೂಡಿಸಲು ಆಗಸ್ಟ್ 07 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಸಂವೇದನಾಶೀಲ ತರಬೇತಿಯನ್ನು ಆಯೋಜಿಸಲಾಗಿದೆ.

ತರಬೇತಿಯಲ್ಲಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಗುಣಮಟ್ಟ, ಭಾರತೀಯ ಮಾನದಂಡಗಳಂತೆ ಗುಣಮಟ್ಟದ ಸರ್ಕಾರದ ಯೋಜನೆಗಳು, ಸರ್ಕಾರದ ಕಾಮಗಾರಿಗಳು, ಗ್ರಾಹಕ ವಸ್ತುಗಳ ಗುಣಮಟ್ಟ, ಆರೋಗ್ಯ ಸೇವೆಯ ಗ್ರಾಹಕ ವಸ್ತುಗಳು, ಉತ್ಪನ್ನಗಳು, ಸುರಕ್ಷತಾ ವಸ್ತುಗಳ ಗುಣಮಟ್ಟ, ಉಪಕರಣಗಳ ಪ್ರಮಾಣಿತ ಗುಣಮಟ್ಟ, ಸುಧಾರಣೆ ಹಾಗೂ ಇದಕ್ಕೆ ಸಂಬಂಧಪಟ್ಟ ವಿಷಯಗಳ ಕುರಿತು ಬಿಐಎಸ್‌ನ ಅಧಿಕಾರಿಗಳು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಅರಿವು ಮೂಡಿಸಿ ಮಾರ್ಗದರ್ಶನ ನೀಡಲಿದ್ದಾರೆ.

ಜಿಲ್ಲೆಯ ಎಲ್ಲ ಇಲಾಖೆಗಳ ಅಧಿಕಾರಿಗಳು ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿ, ತರಬೇತಿಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಬೇಸಿಗೆ ಬೆಳೆಗೂ ನೀರು ಸಿಗಲಿದೆ

## 3 ಲಕ್ಷಕ್ಕೂ ಅಧಿಕ ಕ್ಯುಸೆಕ್ ನೀರು ಹರಿಸಿದ್ರೆ ಹಾನಿ | ಬೇಗನೇ ನಾಟಿ ಮಾಡಿ

## ಸಚಿವ ಶಿವರಾಜ ತಂಗಡಗಿ ಹೇಳಿಕೆ | ನದಿಗೆ 2 ಲಕ್ಷ ಕ್ಯೂಸೆಕ್ಸ್ ನೀರು ಬಿಡಲಾಗಿದೆ



> ಕಂಪ್ಲಿ-ಗಂಗಾವತಿ ಪುರಾತನ ಸೇತುವೆ ಎತ್ತರಿಸಲು ಈಗಾಗಲೇ ಕೆಆರ್‌ಡಿಸಿಎಲ್ ಡಿಪಿಆರ್ ಸಿದ್ದಪಡಿಸಲಾಗಿದೆ. ಸಿಎಂ ಭೇಟಿಯಾಗಿ ಕಾಮಗಾರಿಗೆ ಹಣ ಮೀಸಲಿರಿಸಿ ಸೇತುವೆಯನ್ನು ಎತ್ತರಿಸಲಾಗುವುದು. ಎಕೋ ಮಾದರಿ ಅನುಸರಿಸಿ ಕಂಪ್ಲಿ ಸೇತುವೆಯನ್ನು ನಿರ್ಮಿಸಲಾಗುವುದು.
> – ಶಿವರಾಜ್ ಎಸ್.ತಂಗಡಗಿ, ಸಚಿವ

**ಹಂಪಿ ಟೈಮ್ಸ್ ಕೊಪ್ಪಳ**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್ ತಂಗಡಗಿ ಶುಕ್ರವಾರ ಗ್ರಾಮೀಣ ಭಾಗದಲ್ಲಿ ಪ್ರವಾಸಕೈಗೊಂಡರು.

ತುಂಗಭದ್ರಾ ಡ್ಯಾಮನಿಂದ ನೀರನ್ನು ನದಿಗೆ ಬಿಟ್ಟಿದ್ದರಿಂದ ಉಂಟಾದ ಹಾನಿಯನ್ನು ಪರಿಶೀಲಿಸಿದರು. ಮೊದಲಿಗೆ ಕಾರಟಗಿ ತಾಲೂಕಿನ ಬೆನ್ನೂರ, ಹುಲೇನೂರ ಗ್ರಾಮಗಳಿಗೆ ಭೇಟಿ ನೀಡಿದರು. ನದಿ ದಂಡೆಯ ಮೇಲಿನ ಈ ಗ್ರಾಮಗಳಲ್ಲಿನ ಜಮೀನಿಗೆ ನದಿ ನೀರು ಹರಿದು ಅಗಿರುವ ಹಾನಿಯನ್ನು ಪರಿಶೀಲಿಸಿದರು.

ಬಳಿಕ ಸಚಿವರು, ಗಂಗಾವತಿ ತಾಲೂಕಿನ ಚಿಕ್ಕಜಂತಗಲ್ ಬಳಿ ಕಂಪ್ಲಿ ಸೇತುವೆ ಮುಳುಗಡೆ ಪ್ರದೇಶಕ್ಕೆ ಭೇಟಿ ನೀಡಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಪುರಾತನ ಕಂಪ್ಲಿ-ಗಂಗಾವತಿ ಸೇತುವೆಯನ್ನು ಎತ್ತರಿಸಲು ಎಲ್ಲಾ ರೀತಿಯ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಪ್ರತಿ ವರ್ಷ ಮಳೆಗಾಲದಲ್ಲಿ ಮುಳುಗಡೆಯಾಗುವ ಕಂಪ್ಲಿ-ಗಂಗಾವತಿ ಪುರಾತನ ಸೇತುವೆ ಎತ್ತರಿಸಲು ಈಗಾಗಲೇ ಕೆಆರ್‌ಡಿಸಿಎಲ್ ಡಿಪಿಆರ್ ಸಿದ್ದಪಡಿಸಲಾಗಿದೆ. ಈ ಕುರಿತು ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಕಾಮಗಾರಿಗೆ ಹಣ ಮೀಸಲಿರಿಸಿ ಸೇತುವೆಯನ್ನು ಎತ್ತರಿಸಲಾಗುವುದು. ಎಕೋ ಮಾದರಿ ಅನುಸರಿಸಿ ಕಂಪ್ಲಿ ಸೇತುವೆಯನ್ನು ನಿರ್ಮಿಸಲಾಗುವುದು. ತುಂಗಭದ್ರ ಜಲಾಶವು ಭರ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ನದಿಗೆ ಸುಮಾರು 2 ಲಕ್ಷ ಕ್ಯೂಸೆಕ್ಸ್ ನೀರು ಹರಿಸಲಾಗುತ್ತಿದೆ. ನದಿಯಲ್ಲಿ 3 ಲಕ್ಷಕ್ಕೂ ಹೆಚ್ಚು ಕ್ಯೂಸೆಕ್ಸ್ ನೀರು ಹರಿಸಿದರೆ ಮಾತ್ರ ಈ ಭಾಗದಲ್ಲಿ ಹೆಚ್ಚಿನ ಅವಘಡಗಳಾಗುತ್ತವೆ. ಸದ್ಯ ನದಿ ಪಾತ್ರದಲ್ಲಿ ಅಂತಹ ಅನಾವುತಗಳು ಸಂಭವಿಸಿರುವುದಿಲ್ಲ ಎಂದರು.

ತುಂಗಭದ್ರಾ ಜಲಾನಯನ ಪ್ರದೇಶದಲ್ಲಿ ಸತತ ಮಳೆಯಿಂದಾಗಿ ಡ್ಯಾಂಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದೆ. ಡ್ಯಾಂ ಭರ್ತಿಯಾಗಲು ಇನ್ನು 8 ಅಡಿ ಮಾತ್ರ ಬಾಕಿ ಇದೆ. ಒಳಹರಿವಿನ ಪ್ರಮಾಣದಲ್ಲಿಯೇ ಹೊರ ಹರಿವು ಮಾಡಲಾಗುತ್ತಿದ್ದು, ಒಳಹರಿವು ಕಡಿಮೆಯಾದ ತಕ್ಷಣ ಹೊರ ಹರಿವು ನಿಲ್ಲಿಸಲಾಗುತ್ತದೆ. ಈ ಹಂಗಾಮಿನಲ್ಲಿ ನೀರನ್ನು ಸಂರಕ್ಷಿಸಿ ಬೇಸಿಗೆ ಬೆಳೆಗೂ ನೀರನ್ನು ಉಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ರೈತರು ಬೇಗನೆ ನಾಟಿ ಮಾಡಬೇಕು. ಬೀಜ ಗೊಬ್ಬರದ ಕೊರತೆಯಾಗದಂತೆ ಜಿಲ್ಲಾಡಳಿತ ಕ್ರಮ ಕೈಗೊಂಡಿದೆ ಎಂದರು.

ಗಂಗಾವತಿ ತಹಸೀಲ್ದಾರರಾದ ಯು.ನಾಗರಾಜ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಗ್ರಾ.ಪಂ. ಪಿಡಿಓ ಗಳು, ಮುಖಂಡರಾದ ಶರಣೇಗೌಡ ಪಾಟೀಲ್, ಕೆ.ಸಿದ್ದನಗೌಡ, ರೇಣುಕಾಗೌಡ, ಬಸಯ್ಯಸ್ವಾಮಿ ಹೇರೂರು, ಮಹಮದ್ ರಫಿ, ಬಾಪುಗೌಡ, ವಿಜಯಕುಮಾರ, ರಿಯಾಜ್, ರುದ್ರಗೌಡ ನಂದಿಹಳ್ಳಿ, ಗ್ರಾಮಸ್ಥರು ಇತರರಿದ್ದರು

# ಮಾರ್ಗ ಯಾವುದಯ್ಯ?

## ಹಂಪಿ ಪ್ರವಾಸಿಗರ ಪರದಾಟ ತಪ್ಪಿಸಿ



**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಸ್ಮಾರಕಗಳನ್ನು ನೋಡಿ ಕಣ್ತುಂಬಿಕೊಂಡು ಮರಳಬೇಕೆಂದು ನಾಡಿನ ವಿವಿಧೆಡೆ, ನೆರೆ ರಾಜ್ಯಗಳಿಂದ ಹಾಗೂ ವಿದೇಶಗಳಿಂದಲೂ ಹಂಪಿಗೆ ಅನೇಕರು ಮೊದಲ ಬಾರಿಗೆ ಹಂಪಿಗೆ ಆಗಮಿಸುತ್ತಾರೆ. ಹಂಪಿ ವಿರೂಪಾಕ್ಷೇಶ್ವರ ದರ್ಶನದ ನಂತರ ಬಡವಲಿಂಗ, ಉಗ್ರನರಸಿಂಹ, ಕಮಲ ಮಹಲ್, ಹಜಾರರಾಮ ದೇವಾಲಯ, ಮಹಾನವಮಿ ದಿಬ್ಬ, ರಾಣಿಸ್ನಾನಗೃಹದ ನೋಡಿದಕೊಂಡು ಕಮಲಾಪುರ ಮಾರ್ಗವಾಗಿ ವಿಜಯವಿಠಲ ದೇವಸ್ಥಾನಕ್ಕೆ ಹೋಗುವವರಿಗೆ ಕಮಲಾಪುರದ ಮುಖ್ಯ ರಸ್ತೆಗೆ ಬರುತ್ತಿದ್ದಂತೆ ಯಾವಕಡೆ ತೆರಳಬೇಕು ಎಂಬುದು ತಿಳಿಯದಂತಾಗಿದೆ. ಪ್ರವಾಸಿಗರು ನಿತ್ಯ ರಸ್ತೆ ತಿರುವುನಲ್ಲಿ ವಾಹನಗಳನ್ನು ನಿಲ್ಲಿಸಿ, ರಸ್ತೆಯಲ್ಲಿದ್ದವರನ್ನು ಕೇಳಿ ಹೋಗುವಂತಾಗಿದೆ. ಅನೇಕರಿಗೆ ಭಾಷ ಸಂವಹನ ಸಮಸ್ಯೆ ಎದುರಾಗುತ್ತಿದೆ. ವಾಹನಗಳು ನಿಲ್ಲುವುದರಿಂದ ವಾಹನಗಳ ಸುಮಗ ಸಂಚಾರಕ್ಕೂ ಅಡ್ಡಿಯಾಗುತ್ತಲಿದೆ. ಕೂಡಲೇ ಸಂಬಂಧಿಸಿದ ಇಲಾಖಾಧಿಕಾರಿಗಳು ಗಮನಹರಿಸಿ ಹಂಪಿಯಿಂದ ರಾಣಿಸ್ನಾನಗೃಹ ಮಾರ್ಗವಾಗಿ ಕಮಲಾಪುರಕ್ಕೆ ಸೇರುವ ವೃತ್ತದಲ್ಲಿ ವಿಜಯವಿಠಲ ದೇವಸ್ಥಾನಕ್ಕೆ ಮತ್ತು ಹೊಸಪೇಟೆ ಕಡೆ ತೆರಳುವ ಕುರಿತು ಕಣ್ಣಿಗೆ ರಾಚುವಂತೆ ದಿಕ್ಸೂಚಿಯ ನಾಮಫಲಕ ಹಾಕಿ ಪ್ರಯಾಣಿಕರಿಗೆ, ಪ್ರವಾಸಿಗರ ಅನುಕೂಲ ಕಲ್ಪಿಸಬೇಕೆಂದು ಕಮಲಾಪುರ ನಿವಾಸಿ ವೀರೇಶ ಒತ್ತಾಯಿಸಿದ್ದಾರೆ. ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳ ಕಣ್ಣಿಗೆ ಕಾಣದ ಸಮಸ್ಯೆಗಳು ಜನಸಾಮಾನ್ಯರಿಗೆ ಕಣ್ಣಿಗೆ ಕಾಣಿಸುತ್ತಿದೆ.

# ವಿಜ್ಞಾನ

## ವಜ್ರ ಏಕೆ ಕಠಿಣವಾಗಿರುತ್ತದೆ?

■ ಆರ್.ಬಿ.ಗುರುಬಸವರಾಜ

'ವಜ್ರ ಕಠೋರ' ಎಂಬ ಪದಪುಂಜವನ್ನು ಸಾಮಾನ್ಯವಾಗಿ ಕೇಳಿರಬಹುದು. ಯಾರ ಮನಸ್ಸು ವಜ್ರದಷ್ಟು ಕಠೋರವಾಗಿರುತ್ತದೆಯೋ ಅವರಿಗೆ ಅನ್ವರ್ಥಕವಾಗಿ ವಜ್ರ ಕಠೋರ ಎಂಬ ಪದಪುಂಜ ಬಳಸುತ್ತಾರೆ. ಇಲ್ಲಿ ವಜ್ರ ಕಠೋರವಾಗಿರುತ್ತದೆ ಅಥವಾ ಗಟ್ಟಿಯಾಗಿರುತ್ತದೆ ಎಂಬುದನ್ನು ಗಮನಿಸೋಣ. ಹಾಗಾದರೆ ವಜ್ರಕ್ಕಿಂತ ಗಟ್ಟಿಯಾದ ವಸ್ತು ಇಲ್ಲವೇ? ಎಂದು ಪ್ರಶ್ನಿಸದರೆ ಉತ್ತರ ಹೌದು ಎಂದಾಗಿರುತ್ತದೆ. ಸದ್ಯಕ್ಕೆ ಭೂಮಿಯ ಮೇಲೆ ಅತ್ಯಂತ ಕಠೋರ ಅಂದರೆ ಗಟ್ಟಿಯಾದ ವಸ್ತುವು ಎಂದರೆ ಅದು ವಜ್ರ ಮಾತ್ರ. ಹಾಗಾದರೆ ವಜ್ರ ಏಕೆ ಕಠೋರವಾಗಿರುತ್ತದೆ? ಎಂಬ ಪ್ರಶ್ನೆ ಮೂಡುತ್ತದೆ.

ವಜ್ರಗಳು ವಿಶಿಷ್ಟವಾದ ಪರಮಾಣು ರಚನೆಯಿಂದಾಗಿ ಅಸಾಧಾರಣ ಗಡಸುತನಕ್ಕೆ ಹೆಸರುವಾಸಿಯಾಗಿದೆ. ವಜ್ರವು ಇಂಗಾಲದ ಪರಮಾಣುಗಳಿಂದ ಮಾಡಲ್ಪಟ್ಟಿದ್ದು, ಸ್ಫಟಿಕ ಜಾಲರಿ ರಚನೆಯಲ್ಲಿ ಜೋಡಿಸಲ್ಪಟ್ಟಿರುತ್ತದೆ. ಅದು ಬಲವಾದ ಕೋವೆಲನ್ಸಿಯ ಜಾಲ ರಚನೆಯಲ್ಲಿ ಒಟ್ಟಿಗೆ ಬಂಧಿತವಾಗಿದೆ. ಈ ರಚನೆಯಲ್ಲಿ ಪ್ರತಿ ಕಾರ್ಬನ್ ಪರಮಾಣು ನಾಲ್ಕು ಪಕ್ಕದ ಇಂಗಾಲದ ಪರಮಾಣುಗಳಿಗೆ ಟೆಟ್ರಾಹೆಡ್ರಲ್ ವ್ಯವಸ್ಥೆಯಲ್ಲಿ ಬಂಧಿತವಾಗಿದೆ. ಈ ವ್ಯವಸ್ಥೆಯು ಅತ್ಯಂತ ಬಲವಾದ ಮತ್ತು ಕಟ್ಟುನಿಟ್ಟಾದ ಲ್ಯಾಟಿಸ್ ರಚನೆಯನ್ನು ಸೃಷ್ಟಿಸುತ್ತದೆ. ಲ್ಯಾಟಿಸ್ ರಚನೆಯಲ್ಲಿ ಪರಮಾಣುಗಳನ್ನು ಚಲಿಸಲು ಕಷ್ಟಕರವಾಗಿರುತ್ತದೆ. ಹಾಗಾಗಿ ವಜ್ರಗಳು ಅತ್ಯಂತ ಗಟ್ಟಿಯಾಗುವಂತೆ ಮಾಡುತ್ತದೆ.



ವಜ್ರಗಳು ಹೆಚ್ಚಿನ ಕರಗುವ ಬಿಂದುವನ್ನು ಹೊಂದಿವೆ ಮತ್ತು ರಾಸಾಯನಿಕವಾಗಿ ತುಕ್ಕು ನಿರೋಧಕವಾಗಿರುತ್ತವೆ. ಇದು ಅವುಗಳ ಬಾಳಿಕೆ ಮತ್ತು ಗಡಸುತನಕ್ಕೆ ಕಾರಣವಾಗಿದೆ. ವಜ್ರದ ಕಠಿಣತೆಯ ಗುಣಲಕ್ಷಣಗಳು ವಜ್ರಗಳನ್ನು ಕತ್ತರಿಸುವ ಉಪಕರಣಗಳು, ಆಭರಣಗಳು ಮತ್ತು ಹೆಚ್ಚಿನ ಶಕ್ತಿ ಮತ್ತು ಬಾಳಿಕೆ ಹೊಂದಿರುವ ಅಗತ್ಯ ವಸ್ತುಗಳ ಕೈಗಾರಿಕಾ ಅನ್ವಯಿಕೆಗಳಲ್ಲಿ ಬಳಸಲಾಗುತ್ತದೆ.

ಬಲವಾದ ಇಂಗಾಲದ ಬಂಧಗಳ ಸಂಯೋಜನೆಯು ವಜ್ರಗಳನ್ನು ತುಂಬಾ ಕಠಿಣ ಮತ್ತು ಬಾಳಿಕೆ ಬರುವಂತೆ ಮಾಡುತ್ತದೆ. ಇದು ವಜ್ರಗಳಿಗೆ ವಿಶಿಷ್ಟ ಹೊಳಪು ಮತ್ತು ತೇಜಸ್ಸನ್ನು ನೀಡುತ್ತದೆ. ಬೆಳಕು ಸ್ಫಟಿಕ ಜಾಲರಿಯ ಮೂಲಕ ಹಾದುಹೋಗಲು ಸಾಧ್ಯವಾಗುತ್ತದೆ ಮತ್ತು ವಜ್ರದ ಮೇಲ್ಮೈಯಿಂದ ಪ್ರತಿಫಲಿಸುತ್ತದೆ. ಇದು ಬಣ್ಣ ಮತ್ತು ಬೆಳಕಿನ ಪ್ರಕಾಶಮಾನತೆಯನ್ನು ಹೆಚ್ಚಿಸುತ್ತದೆ.

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಮದುವೆಯ ಮಮತೆಯ ಕರೆಯೋಲೆ : ಒಂದು ಪ್ರಹಸನ

ಬದುಕಿನಲ್ಲಿ ಯಾವಾಗಲೂ ಧನಾತ್ಮಕ ಚಿಂತನೆಗಳನ್ನು ಮಾಡಬೇಕು ಎನ್ನುವುದು ನವಯುಗದ ಮೂಲ ಮಂತ್ರವಾಗಿರುವಾಗ, ನನ್ನ ಅಜ್ಜಿ ಆಗಾಗ್ಗೆ ಹೇಳುತ್ತಿದ್ದ ಮಾತು ನೆನಪಿಗೆ ಬರುತ್ತಿದೆ. ಯಾವುದೇ ಕೆಲಸ-ಕಾರ್ಯಗಳನ್ನು ಮಾಡಬೇಕಾದರೆ ಒಳ್ಳೆಯದ್ದು-ಕೆಟ್ಟದ್ದು ಎರಡನ್ನೂ ಅಂದರೆ ಸಾಧಕ-ಬಾಧಕಗಳನ್ನು ಯೋಚಿಸಿಯೇ ಮುಂದಡಿ ಇಡಬೇಕು ಎನ್ನುವುದು. ಬರೀ ಧನಾತ್ಮ ಚಿಂತನೆಗಳೊಂದಿಗೆ ಸಾಗಿದಾಗ ದುರದೃಷ್ಟದ ವೈಫಲ್ಯತೆಯನ್ನು ಎದುರಿಸುವಲ್ಲಿ ಹಿಂದೆ ಬೀಳುತ್ತೇವೆ ಎನ್ನುವುದು ಅವಳ ಅಭಿಮತ. ಅಂತೆಯೇ ಮದುವೆಗೂ ಮುನ್ನ ಮಸಣದ ಚಿಂತೆ ನನ್ನದು. ಈ ಮದುವೆ ಎನ್ನುವುದು ಸ್ವರ್ಗದಲ್ಲಿ ನಿಶ್ಚಯವಾಗಿರುತ್ತದೆ ಎನ್ನುವ ಮಾತಿದೆಯಾದರೂ ಅದು ಭೂಲೋಕದಲ್ಲಿ ಕಾರ್ಯ ಗತವಾಗಿ ಭಾಗಶಃ ದಾಂಪತ್ಯ ಜೀವನ ಸುಗಮವಾಗಿ ಸಾಗಿ, ಕೆಲಸಂದರ್ಭ ವಿಚ್ಛೇದನಗಳಲ್ಲಿ ಕೊನೆಗೊಳ್ಳುತ್ತದೆ. ಪ್ರಸ್ತುತ ದಿನಮಾನಗಳಲ್ಲಿ ವಿವಾಹ ವಿಚ್ಛೇದನಗಳ ಪ್ರಮಾಣದಲ್ಲಿ ಗಣನೀಯ ಏರಿಕೆಯಾಗಿರುವುದು ಹಲವು ಸಮೀಕ್ಷೆ ಗಳಿಂದ ತಿಳಿದು ಬಂದಿದೆ. ವಿಚ್ಛೇದನಗಳಿಗೆ ಕಾರಣಗಳನೇಕ. ಮನಸಿಲ್ಲದ ಮದುವೆ, ಹಿರಿಯರು ಒಪ್ಪಿ ಅಥವ ಒಪ್ಪದೇ ಮಾಡಿದ ಮದುವೆ, ಪರಸ್ಪರರಲ್ಲಿ ಹೊಂದಾಣಿಕೆಯ ಕೊರತೆ, ಅನುಮಾನ ಇತ್ಯಾದಿ.., "ಸಾವಿರ ಸುಳ್ಳು ಹೇಳಿಯಾದರೂ ಒಂದು ಮದುವೆ ಮಾಡಿಸಬೇಕು" ಅದರಿಂದ ಪುಣ್ಯ ಲಭಿಸುತ್ತದೆ ಎಂಬ ಮಾತಿನಂತೆ, ತಮ್ಮ ಪುಣ್ಯದ ಬಾಬತ್ತಿನ ವೃದ್ಧಿಗಾಗಿ ಹೆಣ್ಣು-ಗಂಡಿಗೂ ಮದುವೆ ಮಾಡಿಸುತ್ತಾರೆ. ಭಾಗಶಃ ಪರಸ್ಪರರು ಸುಳ್ಳಿನ ಸರಮಾಲೆಗಳನ್ನು ಬದಲಿಸಿ ಕೊಂಡೇ ದಾಂಪತ್ಯ ಜೀವನಕ್ಕೆ ಕಾಲಿಡುತ್ತಾರೆ ಎನ್ನಬಹುದು.

"ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು" ಎನ್ನುವ ಅನುಭವಜನ್ಯ ಮಾತಿದೆ. ಮದುವೆ ಮಾಡಬಹುದು, ಮನೆ ಕಟ್ಟಬಹುದು, ಆದರೆ ಕರೆಯೋಲೆಗಳನ್ನು ಛಾಪಿಸುವುದು, ವಿತರಿಸುವುದು ಇದೆಯಲ್ಲವೇ ತಲೆ ಹೋಗುವ ಕೆಲಸವೇ ಸರಿ. ಮದುವೆ ಎಂದರೆ ಒಂದು ವರ್ಷದ ಮುಂಚಿತವೇ ತಯಾರಿ ಶುರುವಿಟ್ಟು ಕೊಳ್ಳುವುದು ವಾಡಿಕೆ. (ಇಂದಿನ ದಿನಮಾನಗಳಲ್ಲಿ ಸ್ವಲ್ಪ ಬದಲಾದಂತಿದೆ) ಮದುವೆಯ ಎಲ್ಲ ಏರ್ಪಾಡು ಆದಮೇಲೆ ಐಯಗಳನ್ನು ಹಿಡಿದು ಲಗ್ನಪತ್ರ ಬರೆಯಿಸಿ ಎರಡೆರಡು ಸಾರಿ ಓದಿದಮೇಲೆ ಶುರುವಿಟ್ಟು ಕೊಳ್ಳುತ್ತದೆ ತಾಪತ್ರಯ..! ಯಾರ ಹೆಸರುಗಳನ್ನು ಹಾಕಿಸುವುದು. ಸುಖಾಗಮನ ಬಯಸುವವರು, ಸ್ವಾಗತ ಬಯಸುವವರು, ಹಿತೈಷಿಗಳು, ಬಂಧುಮಿತ್ರರ ಊರುಗಳ ಹೆಸರು ಇತ್ಯಾದಿ ಪಟ್ಟಿ ಮಾಡಿ ಕೂಲಂಕಷವಾಗಿ ಪರಿಶೀಲಿಸಿ ಲಗ್ನಪತ್ರಿಕೆ ಛಾಪಿಸಿದ್ದಾಯ್ತು. ಯಾರು-ಯಾರಿಗೆ ವಿತರಿಸಬೇಕೆಂಬುದು ಪಟ್ಟಿ ಸಿದ್ಧಪಡಿಸುವುದು, ಅಯ್ಯೋ..! ಲಗ್ನಪತ್ರಿಕೆ ಕಟ್ಟಿಸುವ ದಿನ ಬಂದೇ ಬಿಟ್ಟಿತ್ತು, ಶುರುವಾಗುತ್ತೆ ನೋಡಿ ಕೆಮ್ಮು, ನೆಗಡಿ, ಶೀತ. ಹಿರಿಸೊಸೆ ನಮ್ಮ ಅಪ್ಪನ ಹೆಸರು ಹಾಕಿಸಿಲ್ಲ ಅಂತಾಳೆ, ಕಿರಿ ಸೊಸೆ ನಮ್ಮ ತವರಿನ ಹೆಸರು ಹಾಕಿಸಿಲ್ಲ ಅಂತಾ ವರಾತಾ ತೆಗೆದಿದ್ದಾಳೆ. ಹೀಗೆ ಮರೆತು ಹೋದ ಸಂಬಂಧಗಳು ಕುರಿತಾಗಿ ಪೇಚಿಗೆ ಸಿಲುಕಿ ಒದ್ದಾಡುವ ಹಿಂಸೆ ನಮ್ಮ ಶತ್ರುಗಳಿಗೂ ಬೇಡವೆನಿಸುತ್ತದೆ. ಮದುವೆ ಆಮಂತ್ರಣ ಅಷ್ಟೇ ಅಲ್ಲದೇ ಗೃಹಪ್ರವೇಶ, ಸಾರ್ವಜನಿಕ ಕಾರ್ಯಕ್ರಮಗಳ ಪತ್ರಿಕೆ ಛಾಪಿಸುವಲ್ಲಿಯೂ ಇದೇ ರೀತಿಯ ತಾಪತ್ರಯಗಳನ್ನು ಕಾಣಬಹುದಾಗಿದೆ. ಅಂತೂ ಇಂತೂ ಎಲ್ಲ ಪತ್ರಿಕೆಗಳನ್ನು ಬಂಧು ಬಳಗಕ್ಕೆ ತಲುಪಿಸುವಲ್ಲಿಗೆ ನಿಟ್ಟುಸಿರು ಬಿಡುವಂತಾಗಿರುತ್ತದೆ.



ಡಾ.ಯಲ್ಲಮ್ಮ ಕೆ
ಮಲಪನಗುಡಿ, ಹೊಸಪೇಟೆ

Scan For Digital Colourful
HAMPI TIMES E-paper

ಈ ಹಿಂದೆ ಹಳ್ಳಿಗಳಲ್ಲಿ ಲಗ್ನಪತ್ರಿಕೆ ಬರೆಯುವ ಮತ್ತು ಓದುವ ಒಂದು ಕ್ರಮವಿತ್ತು. ಮನೆಗೆ ಬಂದ ಲಗ್ನಪತ್ರಿಕೆ ಯನ್ನು ಯಜಮಾನ ನಾದವನು ತನ್ನ ಮನೆಯಲ್ಲಿನ ಶಾಲೆಗೆ ಸೇರಿದ ಹಿರಿ ಮತ್ತು ಕಿರಿಯ ಮಕ್ಕಳು ಅಥವಾ ಮೊಮ್ಮಕ್ಕಳಿಂದ ಓದಿಸಿ, ಅದರ ಆಧಾರದಲ್ಲಿಯೇ ಅವರುಗಳ ಬುದ್ಧಿಮತ್ತೆಯನ್ನು ಪರೀಕ್ಷಿಸುತ್ತಿದ್ದದ್ದುಂಟು. ಸರಿಯಾಗಿ ಓದದೇ ಅಪ್ಪನ ಕೈಯಲ್ಲಿ ಪೆಟ್ಟು ತಿಂದಿದ್ದ ನೆನಪು ಇನ್ನೂ ಹಸಿಹಸಿಯಾಗಿ ಉಳಿದಿದೆ. ಕನ್ಯೆಯ ಹೆಸರಿನ ಮುಂದಿನ ಒಕ್ಕಣೆ ಹೀಗಿರುತ್ತಿತ್ತು ಚಿ.ಸೌ.ಹ.ಕುಂ.ಶೋ ಇಂಥ ಕನ್ಯಾರತ್ನವನ್ನು



ಎಂದಿರುವಲ್ಲಿ ಸಾಮಾನ್ಯವಾಗಿ ನಾವು ಎಡವುತ್ತಿದ್ದದ್ದು. ಒಂದು ಪೆಟ್ಟು ನೀಡಿ ? 'ಚಿರಂಜೀವಿ ಸೌಭಾಗ್ಯವತಿ ಹರಿದ್ರಾ ಕುಂಕುಮ ಶೋಭಿತೆ' ಎಂದು ಅಪ್ಪ ಬಿಡಿಸಿ ಹೇಳಿದ ಮೇಲೆಯೇ ನಮಗರ್ಥವಾಗಿದ್ದು. ಹರಿದ್ರವೋ ದರಿದ್ರವೋ ನಮಗಂತೂ ಪೆಟ್ಟು ತಿನ್ನುವುದು ಮಾಮೂಲಾಗಿತ್ತು. ಅಂತೂ ಅಪ್ಪನ ಈ ಪರೀಕ್ಷೆಯಲ್ಲಿ ನಾವು ಗಾಂಧಿ ಮಾರ್ಕ್ಸ್ ಪಡೆದು ಪಾಸಾದದ್ದೇ ನಮ್ಮಯ ಹೆಚ್ಚುಗಾರಿಕೆ ಎಂದು ಬೀಗುತ್ತಿದ್ದೆವು. ಅಂದೆಲ್ಲ ಅಚ್ಚಾಗುತ್ತಿದ್ದ ಎಲ್ಲ ಲಗ್ನಪತ್ರಿಕೆಗಳ ಮುಖಪುಟಗಳ ಮೇಲೆ ಸಾಮಾನ್ಯವಾಗಿ ದೊಡ್ಡಗಾತ್ರದಲ್ಲಿ ಪಾರ್ವತಿ ಮತ್ತು ಪರಮೇಶ್ವರರ ಚಿತ್ರ, ಯಾವುದೋ ಒಂದು ಮೂಲೆಯಲ್ಲಿ ಪ್ರಥಮ ಪೂಜೆ ವಂದಿತ ವಿಘ್ನವಿನಾಶಕನ ಚಿತ್ರ ಸಿಟ್ಟಾಗದಿರಲೆಂದು ಮತ್ತು ಒಳಪುಟದ ಮೇಲೆ ಕವಿರತ್ನ ಕಾಳಿದಾಸ ವಿರಚಿತ ಶ್ಲೋಕ :

**"ಕಲ್ಯಾಣ ಮಂಟಪರೂಢೌ, ಪಾರ್ವತಿ ಪರಮೇಶ್ವರರೌ ।**
**ದಿವ್ಯಾಲಂಕಾರಣೋಪೇತೌ ರಕ್ಷಿತಾಂಚ ವಧುವರರೌ ॥**

ಎಂಬುದರ ಜೊತೆಗೆ ಮನೆ ದೇವರು ಮತ್ತು ಗುರುಗಳ ಹೆಸರು ಇರುವುದು ಸಾಮಾನ್ಯ ಸಂಗತಿಯಾಗಿತ್ತು. ತದ ನಂತರದ ಬೆಳವಣಿಗೆಗಳೆಂದರೆ : ಅಂದಿನ ಘನ ಸರಕಾರವು ಜನಸಂಖ್ಯಾಸ್ಫೋಟ ತಡೆಗಟ್ಟುವಲ್ಲಿನ ಮಹಾತ್ವಾಕಾಂಕ್ಷಿ ಕುಟುಂಬ ಕಲ್ಯಾಣ ಯೋಜನೆಯ ಘೋಷಣೆಗಳ ಜೊತೆಗೆ ಇತರೆ ಅಂಶಗಳನ್ನು ನಾವು ಲಗ್ನಪತ್ರಿಕೆಗಳಲ್ಲಿ ಕಾಣು ವಂತಾಯ್ತು : ಆರತಿಗೊಬ್ಬ ಮಗಳು, ಕೀರ್ತಿಗೊಬ್ಬ ಮಗ ; ಹೆಣ್ಣಾಗಲಿ ಗಂಡಾಗಲಿ ಮನೆಗೊಂದು ಮಗುವಿರಲಿ ; ಊರಿಗೊಂದು ವನ, ಮನೆಗೊಂದು ಮರ ಮತ್ತು ಮಗು ; ಕಾಡು ಉಳಿಸಿ, ನಾಡು ಬೆಳಸಿ ; ನೀರು ಉಳಿಸಿ ನಿಮ್ಮ ಮುಂದಿನ ಪೀಳಿಗೆಗಾಗಿ ಎಂದು ಅಚ್ಚಾಕಿಸಿದ್ದವರು ನೀರು ಉಳಿಸಿದ್ದು, ಕಾಡು ಬೆಳಸಿದ್ದು ನಾ ಕಾಣೆ..! ಆದರೆ ತಮ್ಮ ವಂಶವನ್ನು ನಿಸ್ಸಂದೇಹವಾಗಿ ಬೆಳಸಿದರೆನ್ನಬಹುದು. ಪ್ಲಾಸ್ಟಿಕ್ ಉಪಯೋಗವನ್ನು ತ್ಯಜಿಸಿ ಎಂದವರೇ ತಮ್ಮ ಮದುವೆಯಲ್ಲಿ ಎಥೇಚ್ಛವಾಗಿ ಪ್ಲಾಸ್ಟಿಕ್ ವಾಟರ್ ಗ್ಲಾಸ್ಗಳನ್ನು ಬಳಸಿ ಬಿಸಾಕಿದ್ದು ವಿಪರ್ಯಾಸ..! ಊಟಕ್ಕೆ ಮುನ್ನ ರೈತರನ್ನು ಸ್ಮರಿಸಿ, ಮಲಗುವ ಮುನ್ನ ಸೈನಿಕರಿಗೆ ನಮಿಸಿ..! ಎಂದವರು ಗಂಡು-ಹೆಣ್ಣು ಜೊತೆಯಾಗಿ ಮದುವೆ ಊಟ ಸವಿಯುವಾಗ ಫೋಟೋಗ್ರಾಫರ್ ನ ಅಣತಿಯಂತೆ ಫೋಸು ಕೊಡುವಾಗ ರೈತ ನೆನಪಿಗೆ ಬರದಿರುವುದು ದುಸ್ತರ. ಮದುವೆಯಾಗಿ ಮಧುಚಂದ್ರದ ಕನಸು ಕಾಣುತ್ತಿರುವವರು ಮಲಗುವ ಮುನ್ನ ಸೈನಿಕರನ್ನು ನೆನೆಯುವುದು, ನಮಿಸುವುದು ಅಂದರೆ ಅಸಂಗತ ವಿಷಯವೇ ಸರಿ. ಮೊನ್ನೆ ತಾನೆ ನನಗೆ ತಲುಪಿದ ಮದುವೆಯ ಆಮಂತ್ರಣ ಪತ್ರಿಕೆಯಲ್ಲಿ : 'ಮಾಸ್ಕ್ ಧರಿಸಿ, ಸ್ಯಾನಿಟೈಸರ್ ಬಳಸಿ' ಎಂಬ ಒಕ್ಕಣೆ ನೋಡಿ ಅವರುಗಳ ಸಾಮಾಜಿಕ ಕಳಕಳಿಯನ್ನು ಕಂಡು ಹೆಮ್ಮೆ ಎನಿಸಿತು. ನಾನೂ ಮಾಸ್ಕ್ ಧರಿಸಿಯೇ ಮದುವೆಗೆ ಹೋದೆ. ಸೇರಿರುವ ಅಷ್ಟು ಜನರಲ್ಲಿ ಬೆರಳೆಣಿಕೆ ಜನರು ಮಾತ್ರ ಮಾಸ್ಕ್ ಧರಿಸಿದ್ದರು ಅದರಲ್ಲಿ ನಾನೂ ಒಬ್ಬಳು. ಮಾಸ್ಕ್ ..? ಸ್ಯಾನಿಟೈಸರ್..? ಸಾಮಾಜಿಕ ಅಂತರ ಹಾಗಂದರೇನು ಎಂದು ಕೇಳುವ ವಾತಾವರಣ ಕಂಡು ನಾನೂ ಮಾಸ್ಕ್ ತೆಗೆದು ಬ್ಯಾಗಿನಲ್ಲಿರಿಸಿ ಫೋಟೋಗೆ ಫೋಸು ನೀಡಿದೆ.

ಇಂದಿನ ಹೊಸ ತಲೆಮಾರಿನ ಜನತೆಯಲ್ಲಿ ಪ್ರೀ ವೆಡ್ಡಿಂಗ್ ಸಂಸ್ಕೃತಿ `Pre Wedding Culture or Ceremony' ಅಂದರೆ : ಮದುವೆಗೂ ಮುನ್ನ ಹುಡುಗ-ಹುಡುಗಿ ಹೊರಗಡೆ ದೇವಸ್ಥಾನ, ಉದ್ಯಾನವನ, ಎಲ್ಲೆಂದರಲ್ಲಿ ಸುತ್ತಾಡಿ, ವಿಡೀಯೋ ಚಿತ್ರೀಕರಣ ಮಾಡಿ, ಸಾಮಾಜಿಕ ಜಾಲತಾಣಗಳಾದ : ವ್ಯಾಟ್ಸ್ ಪ್, ಫೇಸ್ ಬುಕ್, ಟೆಲಿಗ್ರಾಂ ಇತ್ಯಾದಿಗಳಲ್ಲಿ ಗಳಲ್ಲಿ ಹರಿ ಬಿಟ್ಟು ಮದುವೆಗೆ ಬರುವಂತೆ ಕೋರುವುದು ಇಂದು ಚಾಲತಿಗೆ ಬಂದಿದ್ದು, ಇಂದು ಹೆಚ್ಚು ಜನಪ್ರಿಯತೆಯನ್ನು ಪಡೆದಿದೆ ಎಂದು ಹೇಳಬಹುದು.

ನನ್ನ ಈ ಲಲಿತ ಪ್ರಬಂಧದ ಮುಖ್ಯ ಆಶಯದ ನೆಲೆಯಲ್ಲಿ ಹೇಳುವುದಾದರೆ.., ನಾವು ಅಪರಿಚಿತರ ಭೇಟಿಯ ಸಂದರ್ಭದಲ್ಲಿ ಭೇಟಿಯ ನಂತರ ಪರಿಚಿತರೇ ಆಗುತ್ತಾರೆ ಆ ಮಾತು ಬೇರೆ. ಹೆಸರು, ಊರು-ಕೇರಿ, ಏನ ಕೆಲಸ ಮಾಡಿಕೊಂಡಿದ್ದಾರೆ, ಮಕ್ಕಳು-ಮರಿ ಅಂತ ಲೋಕಾಭಿರಾಮವಾಗಿ ಉಭಯಕುಶಲೋಪರಿ ಮಾತಾಡಿಕೊಳ್ಳುತ್ತೇವೆ ವಿನಃ ; ರೀತಿ-ನೀತಿ ಮರೆತು ಅಪ್ಪಿ-ತಪ್ಪಿಯೂ ನಿಮ್ಮ ಜಾತಿ ಯಾವುದೆಂದು ಕೇಳುವುದಿಲ್ಲ. ಕೇಳಬಾರದು, ಹಾಗೆ ಕೇಳುವುದು ಅಸಭ್ಯತೆ, ಅನಾಗರೀಕತೆ ಎನಿಸುತ್ತದೆ. ಪರಿಸ್ಥಿತಿ ಈಗ ಬದಲಾಗಿದೆ ಜಾತಿ-ಗೀತಿ ಕೇಳಿ ಪೇಚಿಗೆ ಸಿಲುಕುವ ಗೊಡವೆ ಬೇಡ, ಸುತ್ತ-ಮುತ್ತ ಸೂಕ್ಷ್ಮವಾಗಿ ಅವಲೋಕಿಸಿದರೆ ಸಾಕು. ಬಂದಿರುವ ಜನರಲ್ಲಿ ತಮ್ಮ ಸಾಮರ್ಥ್ಯಾನುಸಾರ ಬೈಕ್, ಸ್ಕೂಟಿ, ಕಾರುಗಳಲ್ಲಿ ಬಂದಿರುತ್ತಾರೆ. ಇವುಗಳ ಹಿಂದೆ-ಮುಂದೆ, ನಂಬರ್ ಪ್ಲೇಟ್ ಗಳನ್ನು ಗಮನಿಸಿದರೆ ಯಾರು ಎಂಬೆಲ್ಲ ಮಾಹಿತಿ ತಿಳಿದು ಬಿಡುತ್ತದೆ. ಇದನ್ನು ಇನ್ನಷ್ಟು ವಿಸ್ತರಿಸುವ 'ಇಟಚಿಟಥಠಡಿಚಿಣಜ' ತಪ್ಪು ಮಾಡುವುದಿಲ್ಲ. ಈ ಅಂಶ ಲಗ್ನಪತ್ರಿಕೆಗಳಿಗೂ ಅನ್ವಯವಾಗುವಂತದ್ದು. ಪತ್ರಿಕೆಯ ಮೇಲೆ ಯಾವ ದೇವರು, ಸಾಧು-ಸಂತರ, ದಾರ್ಶನಿಕರ, ಚಿಂತಕರ ಚಿತ್ರಗಳು ಅಚ್ಚಾಗಿವೆ ಎನ್ನುವುದರ ಮೂಲಕವೇ ಅವರು ಯಾರು..? ಏನು..? ಎತ್ತ..? ಎಂದು ತಿಳಿಯಬಹುದಾಗಿದೆ. ಹಾಗೆ ತಿಳಿಯುವುದು ಸಣ್ಣತನವೆನಿಸುತ್ತದೆ ನಿಜ. ಆದರೂ ಅದು ಸಂಕೇತಿಸುವುದು ಏನನ್ನು..? ಎಂಬುದು ಪ್ರಶ್ನೆಯಾಗಿಯೇ ಉಳಿದು ಬಿಡುತ್ತದೆ. ಅದು ಅವರವರ ಬಕುತಿ-ಭಾವಕ್ಕೆ ಬಿಟ್ಟ ವಿಚಾರ. ಆದರೂ ಗೊತ್ತಿದ್ದು-ಗೊತ್ತಿಲ್ಲದೆಯೋ ಈ ಕ್ರಮದ ಅನುಸರಣೆ ಸಾಗಿದೆ. ಈ ವರೆಗೆ ಕ್ರಮತಪ್ಪಿ ನಡೆದವರನ್ನು ನಾ ಕಾಣೆ. ಇಂಥಹ ಆದರ್ಶಗಳಿಗೆ ಬಲಿಯಾದ ನನ್ನ ಗೆಳತಿಯೊಬ್ಬಳು ತನ್ನ ಲಗ್ನ ಪತ್ರಿಕೆಯಲ್ಲಿ ಅಚ್ಚಾಕಿಸಿದ ಇಬ್ಬದಿತನದ ರೀತಿ-ನೀತಿ ನನಗೆ ಅಚ್ಚರಿಯನ್ನುಂಟು ಮಾಡಿತ್ತು, ಆ ಪತ್ರದಲ್ಲಿ ಇಂತಿತ್ತು :

**'ಎಮ್ಮವರು ಬೆಸಗೊಂಡರೆ ಶುಭಲಗ್ನವೆಂದೆನ್ನಿರಯ್ಯ**
**ರಾಶಿ ಕೂಟ ಋಣ ಸಂಬಂಧ ಉಂಟೆಂದು ಹೇಳಿರಯ್ಯ**
**ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯ**
**ಚಂದ್ರಬಲ ತಾರಾಬಲ ಉಂಟೆಂದು ಹೇಳಿರಯ್ಯ**
**ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯ'.**

**– ಅಣ್ಣ ಬಸವಣ್ಣ**

ಬಸವಣ್ಣನಿಂದ ಸ?ಥಾಪಿತವಾಯಿತು ಎನ್ನುವ ಲಿಂಗಾಯತ ಧರ್ಮದ ದೃಷ್ಟಿಯಲ್ಲಿ ಕಾಲದ ಬಗ್ಗೆ ಶುಭ-ಅಶುಭ ಎಂಬುದಿಲ್ಲ. ಸೃಷ್ಟಿಕರ್ತನನ್ನು ಸ್ಮರಿಸಿಕೊಂಡು ಮಾಡಿದುದೆಲ್ಲ ಶುಭಗಳಿಗೆಯೇ. ಆದ್ದರಿಂದ ನಿಜವಾದ ಲಿಂಗಾಯತನು ರಾಹು ಕಾಲ – ಗುಳಿಕ ಕಾಲ – ಯಮ ಕಂಟಕ ಕಾಲ ಎಂದು ಭೇದವೆಣಿಸದೆ ಗುರು ಬಸವಣ್ಣ – ಲಿಂಗದೇವ – ಜಂಗಮರ ದಿವ್ಯ ಸ್ಮರಣೆ ಮಾಡಿ ಕೆಲಸಗಳನ್ನು ಮಾಡಬೇಕು. ಎಂಬ ತಾತ್ಪರ್ಯದ ಈ ವಚನ ಅಚ್ಚಾಗಿತ್ತು. "ಎಮ್ಮವರು ಬೆಸಗೊಂಡರೆ ಶುಭಲಗ್ನವೆಂದೆನ್ನಿರಯ್ಯ" ಅಂದರೆ ನಮ್ಮವರು ಒಂದೆಡೆ ಸೇರಿಕೊಂಡರೆ ಅದೆ ನಮಗೆ ಒಳ್ಳೆಯ ಗಳಿಗೆ ಅಥವ ಸಮಯವೆಂದು. ಆಗ ಕೆಲಸ ನಿರ್ವಹಿಸಬಹುದು ಎಂದು. ಅಂತೆಯೇ ಎಲ್ಲ ಆಪ್ತೇಷ್ಟರು ಬಂದಾಯ್ತು ವರನು ಕನ್ಯೆಯ ಕತ್ತಿಗೆ ತಾಳಿ ಕಟ್ಟಲು ಮೀನಾ-ಮೇಷ ಎಣಿಸುತ್ತಿದ್ದಾನೆ. ಅವನು ಮಿಥುನ ಲಗ್ನದ ಶುಭಮುಹೂರ್ತಕ್ಕಾಗಿ ಕಾಯುತ್ತಿದ್ದಾನೆ. ಏನಿದರರ್ಥ..? ನನಗೆ ತಿಳಿಯಲಿಲ್ಲ.

ಅದೇ ಲಗ್ನ ಪತ್ರಿಕೆಯಲ್ಲಿ ಮುಂದುವರೆದು ಅಚ್ಚಾಗಿತ್ತು ಅದು ಹೀಗಿದೆ : ಸ್ವಸ್ತಿ ಶ್ರೀ ವಿಜಯಾಭ್ಯುದಯ ಶ್ರೀ ಮನೃಪ ಶಾಲಿವಾಹನ ಶಕೆ 1942 ನೆ ಶಾರ್ವರಿನಾಮ ಸಂವತ್ಸರದ ವೈಶಾಖ ಬಹುಳ ? 07 ದಿನಾಂಕ : 28-11-2020 ಶನಿವಾರ ರಂದು ಶ್ರೀ ಗುರುದೇವತಾ ಕಾರ್ಯ ಹಾಗೂ ಇದೇ ವೈಶಾಖ ಬಹುಳ ? 08 ದಿನಾಂಕ : 29-11-2020 ರವಿವಾರ ಬೆಳಗ್ಗೆ 10-45 ಕ್ಕೆ ಸಲ್ಲುವ ಮಿಥುನ ಲಗ್ನದ ಶುಭ ಮುಹೂರ್ತದಲ್ಲಿ ಮಾಂಗಲ್ಯಧಾರಣ ಅಥವ ಅಕ್ಷತಾ ರೋಪಣವು. ಇದನ್ನು ನಾನು ಅಷ್ಟಾಗಿ ಗಮನಿಸದಿದ್ದದ್ದು ನನ್ನ ತಪ್ಪಾಗಿತ್ತು. ಅಂತೂ ಸಮಯಕ್ಕೆ ಸರಿಯಾಗಿ ಅಂದರೆ ಕರಾರುವಕ್ಕಾಗಿ ಮಿಥುನ ಲಗ್ನದ ಶುಭ ಮುಹೂರ್ತದಲ್ಲಿ ತಾಳಿ ಕಟ್ಟಿದ. ಎಲ್ಲರೊಳಗೆ ಒಂದಾಗು ಮಂಕುತಿಮ್ಮ ಎನ್ನುವಂತೆ ಸವಿಭೋಜನವ ಸವಿದು ಅಲ್ಲಿಂದ ಕಾಲ್ಕಿತ್ತೆನು. ಈ ಘಟನೆಯನ್ನು ನನ್ನ ಅಪ್ಪನ ಮುಂದೆ ಹೇಳೋಣವೆಂದರೆ.., ತಪ್ಪಾಗಿ ಲಗ್ನ ಪತ್ರಿಕೆಯನ್ನು ಓದಿಕೊಂಡಿದ್ದಕ್ಕೆ ಪೆಟ್ಟು ನೀಡುತ್ತಾನೆ ಎನ್ನುವ ಭಯ ಕಾಡುತ್ತಿದೆ, ಅಪ್ಪನ ಎದಿರು ಧೈರ್ಯವಾಗಿ ಮಾತನಾಡಲಾಗದೆ ಅಸಹಾಯಕತೆಯಿಂದ ಸಹೃದಯಿ ಓದುಗರಾದ ನಿಮ್ಮ ಮುಂದಿಟ್ಟು "ಹಾಲಲ್ಲಾದರೂ ಹಾಕು, ನೀರಲ್ಲಾದರೂ ಹಾಕು ರಾಘವೇಂದ್ರ, ಹಾಲಲ್ಲಿ ಕೆನೆಯಾಗಿ ? ನೀರಲ್ಲಿ ಮೀನಾಗಿ ಹಾಯಾಗಿ ಇರುವೆ ಎಂದು ರಾಘವೇಂದ್ರ ಯತಿಗಳಲ್ಲಿ ಮೊರೆಯಿಟ್ಟಿದ್ದೇನೆ.

# ಮಕ್ಕಳ ಪ್ರತಿ ತಪ್ಪಿಗೂ ತಾಯಿಯನ್ನೆ ದೂಷಿಸುವುದೇಕೆ?

**ಜಗತ್ತಿನಲ್ಲಿ ಜನ ದೋಷ ಹುಡುಕಿ ಸಲಹೆ ಕೊಡಲು ಯಾವಾಗಲೂ ಸಿದ್ಧರಿರತಾರೆ, ಅದೇ ತಪ್ಪನ್ನು ತಿದ್ದಿ ಎಂದಾಗ ಯಾರು ಮುಂದೆ ಬರುವುದಿಲ್ಲ.**

ಅಮ್ಮ ಎಂಬ ಪದವೇ ಹಾಗೇ ಅದೊಂದು ಆಪ್ಯಾಯ ಭಾವನೆ. ಮನಸಿಗೆ ಮುದ ನೀಡುವ ಶಬ್ದ.ಅವಳೆಂದರೆ ನಾವು ಹೇಳದೆ ನಮ್ಮ ಮನದ ಮಾತು ತಿಳಿಯುವವಳು ಭಾವನೆಗಳಲ್ಲಿ ಬಂಧಿಯಾಗಿ ರುವವಳು.ಅವಳ ಬಗ್ಗೆ ಕಿಂಚಿತ್ತೂ ಚಿಂತಿಸದೆ ಮಕ್ಕಳ ಕಾಳಜಿಯಲ್ಲೆ ಜೀವನ ಕಳೆಯುವವಳು ಹಾಗಿದ್ದರೂ ಮಕ್ಕಳ ಪ್ರತಿ ತಪ್ಪಿಗೂ ಮಕ್ಕಳ ಆರೋಗ್ಯದ ಏರಿಳಿತಕ್ಕೆ ತಾಯಿಯನ್ನೆ ದೂಷಿಸುವರು.ತಾಯಿ ಯಾವತ್ತಾದರೂ ಬಯಸುತ್ತಾಳಾ..? ನನ್ನ ಮಗುವಿಗೆ ಅನಾರೋಗ್ಯ ಬರಲಿ ಅಥವಾ ಬಿದ್ದು ಗಾಯಗೊಳ್ಳಲಿ ಎಂದು..ಮಗುವಿಗೆ ಶೀತ ಬಂದರೂ ಅವಳ ಅಮ್ಮ ಮಗುವಿಗೆ ಬೆಚ್ಚಗೆ ಇಡಲಿಲ್ಲ ಎಂದು ದೂರುವರೇ ಹೊರತು ಮಗುವಿನ ಅಮ್ಮ ತಣ್ಣಿರಲ್ಲಿ ಕೆಲಸ ಮಾಡತಿರುವುದುರಿಂದ ಹಾಲು ಕುಡಿಯುವ ಮಗುವಿಗೆ ಶೀತ ಬಂದಿತು ಎಂದು ಯಾರು ಹೇಳುವುದಿಲ್ಲ.ಮಗು ತೆಳ್ಳಗಿದ್ದರೂ ಮಗುವಿಗೆ ಊಟ ಮಾಡಿಸುವುದಿಲ್ಲ. ಆಟವಾಡತಾ ಮಗು ಬಿದ್ದರೂ ಅವರಮ್ಮ ಗಮನಿಸಲಿಲ್ಲ ಕಾಳಜಿನೆ ವಹಿಸಲ್ಲವೆಂದು ಕುಟುಂಬದವರು ಟೀಕಿಸುತ್ತಾರಲ್ಲ. ಪುಕ್ಕಟೆ ಸಲಹೆಗಳ ಸುರಿಮಳೆಯೊಂದು ಕಡೆಯಾದರೆ ಬರೀ ದೂಷಿಸುವುದು ಇನ್ನೊಂದು ಕಡೆ ಒಬ್ಬ ತಾಯಿಗಿಂತ ಚೆನ್ನಾಗಿ ಮಗುವಿನ ಬಗ್ಗೆ ಕಾಳಜಿಯಾಗಲಿ ಪೋಷಣೆಯಾಗಲಿ ಬೇರೊಬ್ಬರು ಮಾಡಲು ಸಾಧ್ಯವಿಲ್ಲ ಆದರೂ ತಾಯಿ ತನ್ನದಲ್ಲದ ತಪ್ಪನ್ನು ಒಪ್ಪಿಕೊಳ್ಳುತ್ತಾಳೆ ನಾನೇ ಮಗುವಿನ ಕಡೆ ಇನ್ನಷ್ಟು ಗಮನ ಹರಿಸಬೇಕಿತ್ತು ನಾನೇ ಕಾಳಜಿವಹಿಸಬೇಕಿತ್ತು ಎಂದುಕೊಳ್ಳುತ್ತಾಳೆ.ಮಗು ಬಾಯಿಂದ ಅವಾಚ್ಯ ಶಬ್ದ ಬಂದರೆ ಸಾಕು ಎಲ್ಲರ ದೃಷ್ಟಿ ತಾಯಿಯ ಮೇಲೆ ಇರುತ್ತದೆ ಯಾವ ತಾಯಿ ಬಯಸುತ್ತಾಳೆ ತನ್ನ ಮಕ್ಕಳ ಬಾಯಲ್ಲಿ ಅಪ ಶಬ್ಧಗಳು ಬರಲಿ ಎಂದು ಯಾವ ತಾಯಿ ಕಲಿಸುತ್ತಾಳೆ ಮಕ್ಕಳು ಹೋರಗೂ ಹೋಗತಾರೆ ಬೇರೆ ಮಕ್ಕಳೊಂದಿಗೂ ಬೆರೆಯುತ್ತಾರೆ ಕುಟುಂಬದಲ್ಲಿ ಬೇರೆ ಸದಸ್ಯರು ಇರತಾರೆ ಪ್ರತಿಯೊಂದಕ್ಕೂ ತಾಯಿಯಷ್ಟೇ ಕಾರಣ ಆಗಿರುವುದುದಿಲ್ಲ. ಪರೀಕ್ಷೆಯಲ್ಲಿ ಅನುತ್ತಿರ್ಣರಾದರೂ ತಾಯಿ ಕಾರಣ ಅವರಿಂದ ತಪ್ಪಾದರೂ ತಾಯಿಯೇ ಕಾರಣ ಮಕ್ಕಳ ತಪ್ಪಿಗೆ ಶಿಕ್ಷೆಕೊಟ್ಟರೂ ತಪ್ಪು ಒಟ್ಟಿನಲ್ಲಿ ತಾಯಿ ತಪ್ಪಿಕಸ್ಥೆಯಾಗಿಸುವ ಮನಸ್ಥಿತಿಯ ಜನ. ಕೊಳೆಯನ್ನು ಕೊಳೆಯಿಂದ ತೊಳಿಯುವುದಕ್ಕಾಗು ವುದಿಲ್ಲವೊ ಹಾಗೇ ತಪ್ಪನ್ನು ತಪ್ಪಿಂದ ತಿದ್ದಲಾಗುವುದಿಲ್ಲ. ಪ್ರತಿಯೊಂದಕ್ಕೂ ತಾಯಿಯನ್ನೆ ದೂಷಿಸುತ್ತಾ ಹೋದರೆ ಬೆಳೆಯುವ ಮಕ್ಕಳ ಮನಸ್ಸಿನಲ್ಲೂ ತಾಯಿಯ ಬಗ್ಗೆ ಗೌರವವಾಗಲಿ ಪ್ರೀತಿಯಾಗಲಿ ಉಳಿಯುವುದಿಲ್ಲ. ಹದಿಹರೆಯದ ಮಕ್ಕಳು ತಾಯಿಗೆ ಅನಾದರದಿಂದ ಮಾತಾಡುತ್ತಾರೆಂದರೆ ಅದಕ್ಕೆ ಖಂಡಿತವಾಗಿ ತಾಯಿ ಕಾರಣಳಲ್ಲ ಮನೆಯ ಸದಸ್ಯರು ಅವಳೊಂದಿಗೆ ನಡೆದುಕೊಂಡ ರೀತಿಯನ್ನೆ ಮಕ್ಕಳ ಅನುಕರಿಸುತಿದ್ದಾರಷ್ಟೇ.



ಅಂಜಲಿ ಶ್ರೀನಿವಾಸ
ಹುಬ್ಬಳ್ಳಿ

Hampi Times E-paper
SCAN AND READ

ಸುತ್ತಮುತ್ತಲಿನ ವಾತಾವರಣ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಮಕ್ಕಳು ಸುತ್ತಮುತ್ತಲಿನಲ್ಲಿ ಏನು ನೋಡುತ್ತವೆ ಏನು ಕೇಳುತ್ತವೆಯೊ ಅದೇ ಮಾಡುವರು. ಒಮ್ಮೆ ಚಿತ್ರಕಾರನೊರ್ವ ತನ್ನ ತಾಯಿಗೆ ತಾನು ಬಿಡಿಸಿದ ಚಿತ್ರ ಹೇಗಿದೆ ಎಂದು ಜನರಿಂದ ತಿಳಿಯುವ ಕುತೂಹಲವಿದೆ ಎಂದ. ತಾಯಿ ಹೇಳತಾಳೆ ಆ ರಸ್ತೆಯ ಪಕ್ಕದ ಮರಕ್ಕೆ ನಿನ್ನ ಚಿತ್ರವನ್ನು ಅಂಟಿಸು ಕೆಳಗೆ ಹೀಗೆ ಬರೆದಿಡು ಇದು ನನ್ನ ಚೊಚ್ಚಲ ಚಿತ್ರ ಇದರಲ್ಲಿ ದೋಷವೆನಾದರೂ ಇದ್ದರೆ ಬರೆಯಿರಿ ತಿದ್ದಿಕೊಳ್ಳುವೆನೆಂದು ಬರೆದನು. ಜನ ಚಿತ್ರದಲ್ಲಿನ ದೋಷಗಳ ಉದ್ದ ಮೂಗಾಗಬೇಕಿತ್ತು ಕಣ್ಣು ವಕ್ರವಾಗಿದೆ. ಹೀಗೆ ಹಲವು ಉದ್ದನೆಯ ಪಟ್ಟಿಯೇ ಬರೆದಿಟ್ಟರು. ಇದನ್ನು ಓದಿ ಚಿತ್ರಕಾರನಿಗೆ ತುಂಬಾ ಬೇಸರವಾಗುತ್ತದೆ. ಚಿತ್ರಕಾರನ ತಾಯಿ ಈಗ ಮತ್ತೆ ಈ ಚಿತ್ರವನ್ನು ಇಡು ಅದರ ಕೆಳಗೆ ಈ ಚಿತ್ರದಲ್ಲಿ ದೋಷವಿದ್ದರೆ ದಯವಿಟ್ಟು ತಿದ್ದಿ ಎಂದು ಬರಿದಿಡು ಚಿತ್ರಕಾರ ಹಾಗೇ ಬರೆದ ಮರುದಿನ ಚಿತ್ರ ನೋಡಿದ ಯಾರು ತಿದ್ದಿರಲಿಲ್ಲ ಯಾವ ದೋಷವು ಇಲ್ಲವೆಂದು ಬರೆದಿತ್ತು ಚಿತ್ರಕಾರನಿಗೆ ಆಶ್ಚರ್ಯ ಅವನ ತಾಯಿ ಹೇಳತಾಳೆ ಜಗತ್ತಿನಲ್ಲಿ ಜನ ದೋಷ ಹುಡುಕಿ ಸಲಹೆ ಕೊಡಲು ಯಾವಾಗಲೂ ಸಿದ್ಧರಿರತಾರೆ ಅದೇ ತಪ್ಪನ್ನು ತಿದ್ದಿ ಎಂದಾಗ ಯಾರು ಮುಂದೆ ಬರುವುದಿಲ್ಲ. ಮಕ್ಕಳು ಖಾಲಿ ಹಾಳೆಯಂತೆ ಅದರಲ್ಲಿ ನೀವು ಏನು ಬರೆಯುತ್ತಿರೊ ಅದೇ ರೂಪ ಪಡೆಯುತ್ತಾರೆ .ಕಾಗದವೊಂದು ಕವಿಯ ಕೈಯಲ್ಲಿ ಕವಿತೆ ಪೆದ್ದನ ಕೈಯಲ್ಲಿ ರದ್ದಿ ಮಕ್ಕಳ ಕೈಯಲ್ಲಿ ಸಿಕ್ಕರೆ ಮುದ್ದೆಯಾಗುತ್ತದೆ. ಬೆಳೆಯುವ ಮಕ್ಕಳಿಗೆ ಸುಸಂಸ್ಕೃತರನ್ನಾಗಿ ಮಾಡುವುದಕ್ಕೆ ಸುತ್ತಮುತ್ತಲಿನ ವಾತಾವರಣವು ಮನೆಯವರ ಸಹಕಾರವು ಬೇಕು ಮಕ್ಕಳು ಮನುಕುಲದ ಅಕ್ಕರೆಯ ಹೂವುಗಳು.ದೇಶದ ನಾಳೆಗಳು ದೇಶದ ಏಳ್ಗೆಗಾಗಿ ಮತ ಹಾಕುವುದು ಪ್ರತಿಯೊಬ್ಬರ ಜವಾಬ್ದಾರಿ ಹೇಗೊ ಹಾಗೇ ಮಕ್ಕಳು ಕೂಡ ದೇಶದ ನಾಳೆಗಳು ಅವರನ್ನು ತಿದ್ದುವುದು ಒಬ್ಬ ಒಳ್ಳೆ ಪ್ರಜೆಯನ್ನಾಗಿ ಮಾಡುವುದು ಕೂಡ ಪ್ರತಿಯೊಬ್ಬರ ಜವಾಬ್ದಾರಿ.

**ಕವಿ ಮನಸು**

## ಸಂಪತ್ತು ನೀರು ಪಾಲಾಯಿತು

ಇಲ್ಲಿತ್ತು ಭೂಮಿಯೆಂಬ ಗ್ರಹ..
ಭೂಗ್ರಹದಲಿದ್ದವು ಗೃಹಗಳಗಣಿತ,
ಗಣಿತವ ಮೀರಿದ ಮಾನವನೆಂಬ ಜೀವಿಯ
ಆಸೆಗಳಗಣಿತ..
ಗುಡ್ಡವ ಕೊರೆದು, ನದಿಯನು ತಡೆದು,
ಮನೆಗಳ ಕಟ್ಟಲು ಗಿಡಗಳ ಕಡಿದು,
ಕಾಂಕ್ರೀಟ್ ಬೀಜಗಳ ಬಿತ್ತಿ,
ಹಸಿರಿನ ಕುಲದಮೇಲೆ ಝಳಪಿಸಿದ ಕತ್ತಿ,
ರಕ್ತ ಬೀಜನಂತೆ ಪ್ಲಾಸ್ಟಿಕಾಸುರನ ಬೆಳೆಸಿ,
ಇಂಗಾಲಾಸುರನಿಂದ ಆಮ್ಲಜನಕವ ಅಳಿಸಿ,
ಭೂತಾಯ ಎದೆಯ ಬಗೆದು,
ಪರಿಸರದ ಖಜಾನೆಯ ಮಾಡಿ ಬರಿದು,
ಅಟ್ಟಹಾಸದಿ ಮೆರೆದ ಮಾನವಾಸುರ..
ಸಹನೆಯ ಕಟ್ಟೆಯೊಡೆದು,
ರಣಚಂಡಿಯಾದಳು ಪ್ರಕೃತಿಮಾತೆ,
ಮಾತೆಯಮುಂದೆ ನಡೆಯದು
ಯಾರದೂಮಾತು,
ಮಾನವಾಸುರನ ಅಹಂಕಾರ ಮುರಿಯಿತು,
ಕ್ಷಣಮಾತ್ರದ ಸಂಪತ್ತು ನೀರ ಪಾಲಾಯಿತು..
ಭೂಮಿಯೆಂಬ ಗ್ರಹವು ಅಂತ್ಯವಾಯಿತು...

– ಪ್ರಸನ್ನ ಜಾಲವಾದಿ architecture
ಬೆಂಗಳೂರು

## ನೆಮ್ಮದಿ ಉಳಿಸೂ..




ದಯೆದೋರು ಮಳೆರಾಯ ನೀ ನಮ್ಮಲಿ
ತೊರೆಯುತ ಮುನಿಸೂ ನೆಮ್ಮದಿ ಉಳಿಸೂ,
ನಮ್ಮನು ಹರಸು॥ಪ॥

ಸುತ್ತೆಲ್ಲ ನೆರೆ ತುಂಬಿ ನೆಲ ಮುಳುಗಿದೆ
ವಾಸಿಸುವ ಮನೆಯಿಂದು ಧರೆಗುರುಳಿದೆ
ಬದುಕುಳಿಯೆ ಹೊರಬರಲು ಮನವಿದ್ದರೂ
ರಸ್ತೆಗಳು ಉಳಿದಿಲ್ಲ ಸಂಚಾರಕೆ

ಬಹುದೊಡ್ಡ ಬೆಟ್ಟಗಳು ಕುಸಿಯುತ್ತಿವೆ
ಅದರಡಿಗೆ ಜೀವಗಳು ಸಾಕಷ್ಟಿವೆ
ಬರಬೇಡ ನೀನೆಂದು ನಾ ಹೇಳೆನು
ಹಿತವಾಗಿ ನೀ ಸುರಿದು ಪೊರೆ ನಮ್ಮನು

ನದಿಗಳಲಿ ದಡ ಮೀರಿ ಜಲ ಹರಿದಿದೆ
ನೋಡುತಿರೆ ಭಯ ತರುವ ಕೆಂಬಣ್ಣದೇ
ಕೆಲಜನರು ಮಾಡಿರುವ ಅಪರಾಧಕೆ
ಸರ್ವರಿಗೆ ಈ ರೀತಿ ಸಜೆ ಏತಕೇ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್




**ಸುತ್ತ ಮುತ್ತ**
**ಕುಂದು-ಕೊರತೆ**
**********

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ಕೊರತೆ, ನಿರ್ವಹಣೆ ನಿರ್ಲಕ್ಷ್ಯ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ?

ಹಾಗಾದರೆ ಕೂಡಲೇ ಫೋಟೊ ಕ್ಲಿಕ್ಕಿಸಿ, ವೀಡಿಯೋದೊಂದಿಗೆ ನಿಮ್ಮ ಅಭಿಪ್ರಾಯಗಳನ್ನು
ಹಂಪಿ ಟೈಮ್ಸ್ ದಿನಪತ್ರಿಕೆ
**9448633038**
ವಾಟ್ಸಪ್ ನಂಬರ್ ಗೆ ಕಳುಹಿಸಿ.

# ಒಂದು ವೈಭವೋಪೇತ ವಿವಾಹ...
## ಹೆಣ್ಣು ಮಕ್ಕಳ ಅಸ್ಮಿತೆಯ ಕುರಿತಾದ ಮಾತುಗಳು

ಕೆಲ ದಿನಗಳ ಹಿಂದೆ ಐದು ಸಾವಿರ ಕೋಟಿ ಹಣವನ್ನು ಖರ್ಚು ಮಾಡಿದ ಅತ್ಯಂತ ವೈಭವೋಪೇತ ಮದುವೆ ನಮ್ಮ ಭಾರತ ದೇಶದಲ್ಲಿ ದಾಖಲಾಯಿತು.ಅದ್ದೂರಿ ವಿವಾಹದ, ವರ್ಣ ರಂಜಿತ ಡೆಕೋರೇಷನ್ಗಳು,ಅಲ್ಲಿ ತಯಾರಿಸಲಾದ ಊಟ ತಿಂಡಿಗಳ, ಕ್ರೀಡಾ ಲೋಕದ ಮತ್ತು ಸಿನಿಮಾ ತಾರೆಯರ ಹಾಜರಾತಿಯ ಜೊತೆಗೆ ಕಾರ್ಯಕ್ರಮದಲ್ಲಿ ಹಾಜರಿದ್ದ ನಮ್ಮ ಕರ್ನಾಟಕ ರಾಜ್ಯದ ಪ್ರಭಾವಶಾಲಿಗಳ ಕುರಿತು ಪುಂಖಾನುಪುಂಖವಾಗಿ ವಿಡಿಯೋಗಳು ವೈರಲ್ ಆದವು.

'ನ ಭೂತೋ, ನ ಭವಿಷ್ಯತಿ' ಎಂಬಂತೆ ಅದ್ದೂರಿಯಿಂದ ನಡೆದ ಈ ವಿವಾಹಮಹೋತ್ಸವ ಕಳೆದ ಹಲವಾರು ದಿನಗಳಿಂದ ಚರ್ಚೆಯಲ್ಲಿದೆ. ಅಂಬಾನಿ ಪರಿವಾರದವರ ವೇಷ ಭೂಷಣ, ಆಭರಣಗಳ ಕುರಿತು ಅತಿ ಹೆಚ್ಚು ಚರ್ಚೆಗಳು ನಡೆದಿವೆ,ಆದರೆ ಇದೆಲ್ಲಕ್ಕಿಂತಲೂ ವಿಭಿನ್ನವಾಗಿ ರಿಲಯನ್ಸ್ ಸಂಸ್ಥೆಯನ್ನು ಹುಟ್ಟು ಹಾಕಿ ಹೂಡಿಕೆದಾರರೆಲ್ಲರನ್ನು ತಮ್ಮ ಪರಿವಾರದವರು ಎಂದೇ ಭಾವಿಸುವ ಅಂಬಾನಿ ಪರಿವಾರದ ಸದಸ್ಯರ ನಡೆ-ನುಡಿಗಳು, ಅವರ ವ್ಯಕ್ತಿತ್ವ, ಕುಟುಂಬದಲ್ಲಿ ಹೆಣ್ಣು ಮಕ್ಕಳಿಗೆ ನೀಡುವ ಪ್ರೀತಿ,ಗೌರವ ಮತ್ತು ಪ್ರಾಶಸ್ತ್ಯ, ಕುಟುಂಬದ ಎಲ್ಲ ಸದಸ್ಯರು ಮಕ್ಕಳನ್ನು ಬೆಳೆಸುವ ರೀತಿ ನೀತಿ ಎಲ್ಲರಿಗೂ ಮಾದರಿಯಾಗಿದೆ.

ಅಂಬಾನಿ ಪರಿವಾರದ ಸದಸ್ಯರು ಮದುವೆಗೆ ಆಗಮಿಸಿದ ಸರ್ವರನ್ನು ಪ್ರೀತಿಯಿಂದ ಆಹ್ವಾನಿಸಿದರು. ಪ್ರತಿ ರವಿವಾರ ತಮ್ಮ ಮನೆಗೆ ಊಟ ಸರಬರಾಜು ಮಾಡುವ ಅಜ್ಜಿಯಿಂದ ಹಿಡಿದು ಮದುವೆಗೆ ಸಿಹಿ ತಿಂಡಿಗಳನ್ನು ತಯಾರಿಸಿದ ಪ್ರತಿಯೊಬ್ಬರನ್ನು ಅಷ್ಟೇ ಕಾಳಜಿಯಿಂದ, ಆದರಪೂರ್ವಕವಾಗಿ ನಡೆಸಿಕೊಂಡರು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಈಗಾಗಲೇ ಮೊಮ್ಮಕ್ಕಳನ್ನು ಕಂಡಿರುವ ಮುಕೇಶ್ ಅಂಬಾನಿ, ನೀತಾ ಅಂಬಾನಿ ಮತ್ತು ಅವರ ಮಕ್ಕಳು ಮತ್ತು ಸೊಸೆಯಂದಿರು ತಮ್ಮ ಮಕ್ಕಳನ್ನು ಕೆಲಸದವರ ಸುಪರ್ದಿಗೆ ಕೊಡದೆ ತಾವೇ ತೊಡೆಯ ಮೇಲೆ ಕೂರಿಸಿಕೊಂಡು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದು ವಿಶೇಷ ಗಮನವನ್ನು ಸೆಳೆಯಬೇಕಿತ್ತು. ಕಾರ್ಯಕ್ರಮದಲ್ಲಿ ಪಾಲ್ಗೊಂಡ ಅಂಬಾನಿ ಪರಿವಾರದ ಯಾವುದೇ ಹೆಣ್ಣು ಮಕ್ಕಳ ಕೈಯಲ್ಲಿ ಮೊಬೈಲ್ ಫೋನ್ ಇರಲಿಲ್ಲ... ಅದಾಗ್ಯೂ ಒಮ್ಮೆ ಅಂಬಾನಿ ಪರಿವಾರದ ಹಿರಿಯ ಸೊಸೆ ಶ್ಲೋಕ ಮೆಹತಾಗೆ ಫೋನಿನ ಅವಶ್ಯಕತೆ ಬಿದ್ದಾಗ ಪತಿಯಿಂದ ಕೇಳಿ ಪಡೆದದ್ದು ಕಂಡು ಬರುತ್ತದೆ.

ಇನ್ನು ಮದುವೆಯ ಮುಖ್ಯ ವಿಧಿ ವಿಧಾನಗಳನ್ನು ಪೂರೈಸುವಾಗ ಸ್ವತಃ ನೀತಾ ಅಂಬಾನಿ ಬೀಗರನ್ನು ಪ್ರೀತಿಯಿಂದ ಸಂಬೋಧಿಸಿ ನಮಗೆ ನಮ್ಮ ಸೊಸೆಯಾಗಿ



ಬರುವ ರಾಧಿಕಾಳ ಮೇಲೆ ಇರುವಷ್ಟೇ ಹಕ್ಕು ನಿಮಗೆ ನಿಮ್ಮ ಅಳಿಯನಾದ ಅನಂತ್ ಮೇಲೆ ಇದೆ. ನಾವು ನಿಮ್ಮ ಕುಟುಂಬದಿಂದ ಓರ್ವ ಮಗಳನ್ನು ಪಡೆದಿದ್ದರೆ ನೀವು ನಮ್ಮ ಕುಟುಂಬದಿಂದ ಓರ್ವ ಮಗನನ್ನು ಪಡೆದಿದ್ದೀರಿ ಎಂದು ಹೇಳಿದ್ದು ಆಕೆಯ ಮಾನಸಿಕ ಪ್ರಬುದ್ಧತೆಗೆ ಸಾಕ್ಷಿ.

ಎಲ್ಲರನ್ನು ಅತ್ಯಂತ ಸಹನೆಯಿಂದ, ಪ್ರೀತಿಯಿಂದ ಮಾತನಾಡಿಸಿ ಕಾರ್ಯಕ್ರಮವನ್ನು ವಿಶಿಷ್ಟವಾಗಿ ಆಯೋಜಿಸಿ ಯಶಸ್ವಿಯಾದಾಕೆ ನೀತಾ ಅಂಬಾನಿ. ಒಂದು ಮನೆಯ ಹೆಣ್ಣು ಮಗಳು ಅದೆಷ್ಟೇ ಐಶ್ವರ್ಯವನ್ನು ಹೊಂದಿದ್ದರು ತನ್ನ ನಯ ವಿನಯ, ಪ್ರೀತಿ, ವಾತ್ಸಲ್ಯ ಮತ್ತು ಒಳ್ಳೆಯ ಮನೋಭಾವಗಳ ಸಂಗಮ ಆದಾಗ ಆ ಕುಟುಂಬ ನಂದನವನವಾಗುವುದರಲ್ಲಿ ಸಂಶಯವಿಲ್ಲ. ಇದೆಲ್ಲಕ್ಕೂ ಹೆಚ್ಚು ಮನಸ್ಸಿಗೆ ಹಿಡಿದಿದ್ದು ನೀತಾ ಅಂಬಾನಿಯವರ ಕನ್ಯಾದಾನದ ಕುರಿತಾದ ಕಾವ್ಯಮಯ ಶೈಲಿಯ ವಿವರಣೆ ಮದುವೆಗೆ ಆಗಮಿಸಿದ್ದ ಎಲ್ಲ ಅತಿಥಿ ಅಭ್ಯಾಗತರ ಕಣ್ಣುಗಳಲ್ಲಿ ಆನಂದ ಭಾಷ್ಪ ತರಿಸಿದ್ದು, ಭಾರತೀಯ ಸಂಸ್ಕೃತಿಯ ವಿವಾಹ ಮಹೋತ್ಸವದ ಕುರಿತಾಗಿ ಹೆಮ್ಮೆಯನ್ನು, ಅಭಿಮಾನವನ್ನು ಸ್ಫುರಿಸುವಂತೆ ಮಾಡಿತ್ತು. ಹೆಣ್ಣು ಮಕ್ಕಳು ತಮ್ಮನ್ನು ಹೆತ್ತ ಕುಟುಂಬದ ಪಾಲಿಗೆ ಆಶೀರ್ವಾದವಾಗಿ ಬಂದಿರುತ್ತಾರೆ.ಹೆಣ್ಣು ಮಕ್ಕಳು ನಮ್ಮ ಬಾಳಿನಲ್ಲಿ ಪ್ರೀತಿ ಆನಂದ ಮತ್ತು ಸನ್ಮಂಗಳತೆಯನ್ನು ತರುತ್ತಾರೆ.

ಭಾರತೀಯ ವಿವಾಹ ಸಂಸ್ಕೃತಿಯಲ್ಲಿ ವಧು ಮತ್ತು ವರರಿಗೆ ಸಮನಾದ ಸ್ಥಾನವಿದೆ. ಕನ್ಯಾ ದಾನ ಎಂಬುದು ಭಾರತೀಯ ಸಂಸ್ಕೃತಿಯ ಅತ್ಯಂತ ಮಹತ್ವದ ಕ್ರಿಯೆ ಆಗಿದ್ದು ಯಾವ ಪಾಲಕರೂ ತಮ್ಮ ಮಕ್ಕಳನ್ನು ದಾನವಾಗಿ ಕೊಡುವುದಿಲ್ಲ. ತಾನು ಹುಟ್ಟಿದ ಮನೆಯ ಸದಸ್ಯರ ಪ್ರೀತಿ, ಸಂತೋಷ ಮತ್ತು ನೆನಪುಗಳನ್ನು ಬದುಕಿನುದ್ದಕ್ಕೂ ಹೊಂದಿರುವ ಕುಟುಂಬದ ಹೃದಯದ ಭಾಗವಾಗಿರುವ ಹೆಣ್ಣು ಮಕ್ಕಳನ್ನು ಪಾಲಕರು ಅದು ಹೇಗೆ ಕೊಟ್ಟುಬಿಡುತ್ತಾರೆ... ಹಾಗೆಕೊಡಲುಹೆಣ್ಣುಮಕ್ಕಳೇನುಸೊತ್ತಲ್ಲ!,ಬದಲಾಗಿಕಾಪಿಟ್ಟುಕೊಳ್ಳಬಹುದಾದ ಆಶೀರ್ವಾದ ಮತ್ತು ಅಮೂಲ್ಯ ಆಸ್ತಿ.

ಸಂತೋಷದ ಮೂಲವೇ ಹೆಣ್ಣು ಮಕ್ಕಳು, ದಿವ್ಯ ಜ್ಯೋತಿಯಂತೆ ಬೆಳಗುವ ಹೆಣ್ಣು ಮಗಳು ವಿವಾಹವಾದ ನಂತರ ಗಂಡನ ಮನೆಯಲ್ಲಿ ಕೂಡ ತನ್ನ ಬೆಳಕಿನ ಪ್ರಭೆಯನ್ನು ಹಂಚಿಕೊಳ್ಳಬಲ್ಲವಳು ಎಂದು ನೀತಾ ಅಂಬಾನಿ ಕನ್ಯಾ ದಾನದ ಕುರಿತಾಗಿ ಹೇಳುತ್ತಿರುವಾಗ ಮುಕೇಶ್ ಅಂಬಾನಿ ಸೇರಿದಂತೆ ಅಲ್ಲಿ ನೆರೆದಿದ್ದ ಎಲ್ಲ ಪ್ರಮುಖರ ಕಣ್ಣುಗಳಲ್ಲಿ ಹೆಣ್ಣಿನ ಕುರಿತಾದ ಕೃತಜ್ಞತೆಯ ಕಣ್ಣೀರಿತ್ತು.

ಭಾರತೀಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳು ಹೆಣ್ಣು ಮಕ್ಕಳಿಗೆ ಮಹತ್ತರ ಸ್ಥಾನವನ್ನು ನೀಡಿವೆ. ನಮ್ಮ ಪೂರ್ವಜರು" ಹೆಣ್ಣು ಮಕ್ಕಳು ನೆಲೆಸಿದಲ್ಲಿ ಮಂಗಳವಾಗುತ್ತದೆ, ದೇವತೆಗಳು ಕೂಡ ನೆಲೆಸಿರುತ್ತಾರೆ" ಎಂದು ಹೇಳಿದ್ದಾರೆ. ಹೆಣ್ಣು ಮಕ್ಕಳಿಗೆ ದೇವರು ಅತ್ಯಂತ ದಿವ್ಯವಾದ ಶಕ್ತಿಯನ್ನು ದಯಪಾಲಿಸಿದ್ದು ಹೆಣ್ಣು ಮಕ್ಕಳು ಮನೆಯನ್ನು ಸ್ವರ್ಗವಾಗಿಸುತ್ತಾರೆ ಎಂದು ಕೂಡ ಆಕೆ ಹೇಳಿದರು. ಭಾರತೀಯ ವಿವಾಹ ಸಂಸ್ಕೃತಿಯ ಬುನಾದಿಯು ವಧು-ವರರು ಮತ್ತು ಅವರ ಕುಟುಂಬಗಳ ನಡುವೆ ಸಂಪೂರ್ಣ ಸಮಾನತೆಯನ್ನು ಸಾರುತ್ತದೆ. ಅಂತೆಯೇ ವಧುವಿನ ತಂದೆ ತಾಯಿಗಳು ವರನನ್ನು ತಮ್ಮ ಮಗನೆಂದು ಭಾವಿಸಿ, ತಮ್ಮ ಮಗಳನ್ನು ಆತನ ಕುಟುಂಬಕ್ಕೆ ಒಪ್ಪಿಸುತ್ತಾರೆ.

ಯಾವ ಪಾಲಕರು ಎಂದಿಗೂ ತಮ್ಮ ಮಕ್ಕಳನ್ನು ದಾನವಾಗಿ ಕೊಡುವುದಿಲ್ಲ ಎಂಬುದು ಮಗಳಾಗಿ, ತಾಯಿಯಾಗಿ,ಅತ್ತೆಯಾಗಿ ನನಗೆ ಗೊತ್ತಿದೆ.

ಜೀವನವು ನಮಗೆ ದಯಪಾಲಿಸುವ ಅತಿ ದೊಡ್ಡ ಆಶೀರ್ವಾದ ಮತ್ತು ಸಂತೋಷವೇ ಹೆಣ್ಣು ಮಕ್ಕಳು.

ಹೆಣ್ಣು ಮಕ್ಕಳು ಹುಟ್ಟಿದ ಸಮಯದಿಂದಲೇ ಲಕ್ಷ್ಮಿಯ ರೂಪದಲ್ಲಿ ನಮ್ಮ ಮನೆಗೆ ಸಮೃದ್ಧಿ ಮತ್ತು ಮಂಗಳವನ್ನು ತರುತ್ತಾರೆ.ನಮ್ಮ ಅಸ್ತಿತ್ವದೊಂದಿಗೆ ಹೆಣೆದುಕೊಂಡಿರುವ ನಮ್ಮ ಆತ್ಮದ ತುಣುಕುಗಳು ನಮ್ಮ ಹೆಣ್ಣು ಮಕ್ಕಳು ಎಂದು ಭಾವನಾತ್ಮಕವಾಗಿ ಉದ್ಧರಿಸಿದ ನೀತಾ ಅಂಬಾನಿ ಹೆಣ್ಣು ಮಕ್ಕಳ ಗೌರವ ಘನತೆಯನ್ನು ಸಾರಿ ಸಾರಿ ಹೇಳಿದ್ದಾರೆ.

ಕಳೆದ ತಿಂಗಳು ಜುಲೈ 12ರಂದು ಅತ್ಯಂತ ಅದ್ದೂರಿಯಾಗಿ ನಡೆದ ಈ ವಿವಾಹ ಮಹೋತ್ಸವದಲ್ಲಿ ದೇಶ ವಿದೇಶಗಳ ಗಣ್ಯಾತಿಗಣ್ಯರು, ಉದ್ಯಮಿಗಳು ಸೆಲೆಬ್ರಿಟಿಗಳ ಜೊತೆ ಜೊತೆಗೆ ರಿಲಯನ್ಸ್ ಪರಿವಾರಕ್ಕೆ ಆಪ್ತರಾದ ಸ್ನೇಹ ಬಳಗದವರು ಪಾಲ್ಗೊಂಡಿದ್ದರು.

ಆದರೆ ಮುಖ್ಯವಾಗಿ ಇಲ್ಲಿ ಕಂಡದ್ದು ವೈಭವದ ಜೊತೆ ಜೊತೆಗೆ ನಮ್ಮ ಭಾರತೀಯ ಸಂಸ್ಕೃತಿಯ ಹಿರಿಮೆ, ಗರಿಮೆಗಳನ್ನು ಸಾರಿ ಹೇಳಿದ ಅಂಬಾನಿ ಪರಿವಾರದ ಸದಸ್ಯರ ನಡುವಣ ಪರಸ್ಪರ ಪ್ರೀತಿ, ವಿಶ್ವಾಸ, ಹೆಣ್ಣು ಮಕ್ಕಳಿಗೆ ನೀಡುವ ಗೌರವಾದರಗಳು ವಿಶೇಷ ಮೆಚ್ಚುಗೆಗೆ ಪಾತ್ರವಾದವು.ಜಗತ್ತಿನ ಕಣ್ಣು ಅಂಬಾನಿ ಪರಿವಾರದ ಈ ವಿವಾಹ ಮಹೋತ್ಸವದ ಮೇಲೆ ಇದ್ದಾಗ ನಿಜವಾಗಿಯೂ ಭಾರತೀಯ ಸಂಸ್ಕೃತಿ ಮತ್ತು ಸಭ್ಯತೆಯನ್ನು ಎತ್ತಿ ಹಿಡಿಯುವ ಮೂಲಕ ಇಡೀ ಸಂಸಾರದ ಚುಕ್ಕಾಣಿ ಹಿಡಿದಿರುವ ನೀತಾ ಅಂಬಾನಿ ಮತ್ತು ಪರಿವಾರ ಯಶಸ್ವಿಯಾಗಿದೆ ಎಂದರೆ ತಪ್ಪಿಲ್ಲ. ಕುಟುಂಬದ ಸದಸ್ಯರ ಮಧ್ಯದಲ್ಲಿರುವ ಪರಸ್ಪರ ಪ್ರೀತಿ, ವಿಶ್ವಾಸ, ಬಾಂಧವ್ಯಗಳು ಸದಾ ಹೀಗೆಯೇ ಇರಲಿ ಎಂದು ಹಾರೈಸೋಣ.

# ಜನರ ಪ್ರಾಣ ರಕ್ಷಿಸಿದ ರಿಯಲ್ ಹೀರೋಸ್
## ಯೋಧರನ್ನ ದೇವರೇ ರಕ್ಷಿಸಲಿ



■ ನಂದಿನಿ ಸನಬಾಲ್, ಗುಲ್ಬರ್ಗಾ

ನೀವು ದೇವಧೂತರನ್ನು ನೋಡಿದ್ದೀರಾ? ಕಥೆ ಕಾದಂಬರಿಗಳಲ್ಲಿ ಮಾತ್ರ ದೇವಧೂತರ ಬಗ್ಗೆ ಕೇಳಿದ್ದೇವೆ ಅಲ್ವಾ?ಇವರೆ ಪ್ರಾಣರಕ್ಷಕರು, ವೀರರು, ಹೋರಾಟಗಾರರು, ಗಂಡುಗಲಿಗಳು, ಮಾನವೀಯತೆಯ ಹರಿಕಾರರು....ಇವರೆ NDRF (ರಾಷ್ಟ್ರೀಯ ವಿಪತ್ತು ನಿರ್ವಹಣ ತಂಡ) ಜನರ ನ್ನು ರಕ್ಷಿಸುವ ವೀರರು...... ಗುಡ್ಡದ ಕೆಳಗೆ ಜೀವದ ಹಂಗಿಲ್ಲದೆ ಶವ ತೆಗೆದು, ಪ್ರವಾಹದ ರಭಸಕ್ಕೂ ಲೆಕ್ಕಿಸದೆ ಜನರನ್ನು ಹೊತ್ತುಕೊಂಡು ಸುರಕ್ಷಿತ ಸ್ಥಳಕ್ಕೆ ಕರೆದ್ದೊಯುವ, ಮುಳ್ಳಿನ ಕಂಟ್ಟಿ, ಕೆಸರಲ್ಲಿ ಸಿಲುಕಿರುವ ದೇಹದ ಭಾಗಗಳನ್ನು ತೆಗೆದುಕೊಂಡು ಹೋಗುವ ಸಿಪಾಯಿಗಳು, ಮೇಲೆ ಮಳೆ, ಕೆಳಗೆ ಪ್ರವಾಹ ಇವುಗಳ ಮದ್ದೆ ರೆಡ್ ಅಲರ್ಟ್ ಇರುವ ಸ್ಥಳಗಳಲ್ಲಿ ಇವರು ತಮ್ಮ ನಿಸ್ವಾರ್ಥ ಸೇವೆ ಮಾಡುವುದು....ಹೆಚ್ಚುತ್ತಿರುವ ಪಕೃತಿವಿಕೋಪಗಳು, ಭೂ ಕುಸಿತ, ಗುಡ್ಡಗಳ ಕುಸಿತ, ಪ್ರವಾಹ, ನೆರೆ ಹಾವಳಿ, ಭೂಕಂಪ, ಜ್ವಾಲಾಮುಖಿ, ಕಾಡಗಿಚ್ಚು ಹೀಗೆ ನಡೆಯುವ ಅವಾಂತರಗಳ ಪರಿಸ್ಥಿತಿಯಲ್ಲಿ ಜನರ ಪ್ರಾಣ ರಕ್ಷಿಸಲು ದೇವಧೂತರಂತೆ ಕೇಸರಿ ಬಣ್ಣದ ಸಮವಸ್ತ್ರದೊಂದಿದೆ ಓಆಖಈ ತಂಡ ಬಂದೆ ಬಿಡುತ್ತೆ. ಇವರ ಸೇವೆ ಶ್ಲಾಘನಿಯ, ಇವರ ತಾಳ್ಮೆ, ಧೈರ್ಯ, ಜನರಿಗೆ ಸಮಾಧಾನ ಹೇಳುವ ಮಾನವೀಯತೆ ಮೆಚ್ಚುವಂತಹದು. National Disaster Response Force ಇದು 2005 ಜನೇವರಿ 19 ರಂದು ಸ್ಥಾಪನೆಗೊಂಡಿದ್ದು. ಇಲ್ಲಿ ವಿಪತ್ತು ನಿರ್ವಹಣೆ ಹಾಗೂ ಪರಿಸ್ಥಿತಿ ಹತೋಟಿಯಲ್ಲಿ ತರುವಂತ ತರಬೇತಿ ನೀಡುತ್ತಾರೆ. ಇದರ ಅಡಿಯಲ್ಲಿ BSF, CISF, CRPF, ಇಟ್ಬಿಪ್, ಸುಬ್, ಅಸ್ಸಾಂ ರೈಫಲ್ಸ್.... ಹೀಗೆ 16 ಬಾಟಲಿಯನ್ಗಳಿವೆ. ಇದು ಕೇಂದ್ರ ಗೃಹ ಮಂತ್ರಾಲಯದ ಅಧಿನದಲಿದ್ದು, ಇದರ ಅಧ್ಯಕ್ಷರು ಪ್ರಧಾನಮಂತ್ರಿ ಇರುತ್ತಾರೆ. NDRF ತಂಡದ ಮುಖ್ಯಲಯದ ಕೇಂದ್ರ ಕಛೇರಿ ಅಂತ್ಯೋದಯ ನವ ದೇಹಲಿಯದೆ. ಇದರ ಉದ್ದೇಶ motto "saving lives and beyond". ವಿಪತ್ತು ಎಂದರೆ "ಯಾವುದೆ ಪ್ರದೇಶದಲ್ಲಿ ನೈಸರ್ಗಿಕ ಅಥವಾ ಮಾನವ ನಿರ್ಮಿತ ಕಾರಣಗಳಿಂದ ಉಂಟಾಗುವ ದುರಂತ, ಅಪಘಾತ ಅಥವಾ ಗಂಭೀರ ಘಟನೆಯನ್ನು ವಿಪತ್ತು ಎನ್ನುವರು". 2000 ಹಾಗೂ 2004ರಲ್ಲಿ ವಿಪತ್ತು ಉಂಟಾದಾಗ ಅಪಾರ ಪ್ರಾಣ ಹಾನಿ, ಆಸ್ತಿ ಹಾನಿ ಆದಾಗ ಒಂದು ಸೇವಾ ಸಂಘದ ಅಗತ್ಯಗೆ ಕಾಣಿಸಿದಾಗ ಕೇಂದ್ರ ಸರಕಾರವು NDRF ತಂಡದ ಅಗತ್ಯತೆ ಅರಿತು, ಈ ತಂಡದ ಸ್ಥಾಪನೆ ಮಾಡಿದರು. ಇವತ್ತು ಹೆಚ್ಚುತ್ತಿರುವ ಅನಾಹುತಗಳಿಗೆ ಮಾನವ ಕಾರಣ, ಆದರೆ NDRF ತಂಡದ ಕೆಲಸ ಶ್ಲಾಘನಿಯ. ಜೀವ ಭಯ ಬಿಟ್ಟು ಅನಾಹುತದ ಸ್ಥಳಗಳಲ್ಲಿ ಬಂದಿಳಿಯುವ ಯೋಧರಿಗೆ ದೇವರೇ ರಕ್ಷಿಸಬೇಕು.



ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

**03–08–2024 – ಶನಿವಾರ**

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪುನರ್ವಸು |
| ಯೋಗ | : ವಜ್ರ |
| ಕರಣ | : ಶಕುನಿ |
| ಸೂರ್ಯೋದಯ | : 05:59:40 |
| ಸೂರ್ಯಾಸ್ತ | : 19:06:14 |
| ರಾಹು | : 09:16–10:55 |
| ಯಮಘಂಡ | : 14:11–15:50 |
| ಗುಳಿಕ | : 05:59–07:38 |

## ತುಂಗಭದ್ರಾ ನೀರಿನ ಮಟ್ಟ




ಶುಕ್ರವಾರ : 02–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.22 ಅಡಿ |
| ಒಳ ಹರಿವು | 197468 ಕ್ಯುಸೆಕ್ |
| ಹೊರ ಹರಿವು | 178851 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 98.726 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1626.51 ಅಡಿ |
| ಒಳ ಹರಿವು | 29763 ಕ್ಯುಸೆಕ್ |
| ಹೊರ ಹರಿವು | 2099 ಕ್ಯುಸೆಕ್ |
| ಸಾಮರ್ಥ್ಯ | 81.540 ಟಿಎಂಸಿ |

# ರಾಜ್ಯ ಸರ್ಕಾರ ದಲಿತರಿಗೆ ಒಳಮೀಸಲಾತಿ ಕಲ್ಪಿಸಬೇಕು

## ಕಾಂಗ್ರೆಸ್ ಅನೇಕಬಾರಿ ದಲಿತರ ಮೂಗಿಗೆ ತುಪ್ಪ ಸವರಿದೆ ಎಂದ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಲ್ಲಾಹುಣಸಿ ರಾಮಣ್ಣ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ:**
ಪರಿಶಿಷ್ಟ ಸಮುದಾಯದ ಒಳ ಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ ಅನೇಕಬಾರಿ ದಲಿತರಿಗೆ ಮೂಗಿಗೆ ತುಪ್ಪ ಸವರುವ ಕೆಲಸಮಾಡಿತು ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಲ್ಲಾಹುಣಸಿ ರಾಮಣ್ಣ ಆರೋಪಿಸಿದರು.
ಪಟ್ಟಣದ ರಾಮನಗರ ವೃತ್ತದಲ್ಲಿ ಬಿಜೆಪಿ ಎಸ್.ಸಿ.ಮೋರ್ಚ ಜಿಲ್ಲಾ ಮತ್ತು ತಾಲೂಕು ಘಟಕಗಳಿಂದ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ, ಪರಿಶಿಷ್ಟ ಸಮುದಾಯದ ಒಳ ಮೀಸಲಾತಿ ಕಾನೂನು ಬದ್ಧ ಎಂದು ಸುಪ್ರೀಂಕೋರ್ಟ್ ತೀರ್ಪು ಹಿನ್ನೆಲೆಯಲ್ಲಿ ಸಂಭ್ರಮಾಚರಣೆಯ ಬಳಿಕ ಅವರು ಮಾತನಾಡಿದರು. ಸಂವಿಧಾನದ ಲಾಭ ಸಮುದಾಯದ ಕಟ್ಟಕಡೆಯ ವ್ಯಕ್ತಿಗೂ ದೊರೆಯಬೇಕು ಎನ್ನುವ ಕಾರಣದಿಂದ ಈ ತೀರ್ಪು ಸೂಕ್ತವಾಗಿದೆ ಎಂದರು. ಕನಿಷ್ಟ 30 ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿದ್ದರೂ ನಮಗೆ ನ್ಯಾಯದೊರಕಿರಲಿಲ್ಲ. ಸದಾಶಿವ ಆಯೋಗ ಮಾಡಿದರೂ, ಪ್ರಾಮುಖ್ಯತೆ ನೀಡದೆ ಕಡೆಗಾಣಿಸಿದರು. ಅದೇ ನಮ್ಮ ಪಕ್ಷದ ಆಡಳಿತದಲ್ಲಿ ಯಡಿಯೂರಪ್ಪನವರು ಪ್ರಾಮುಖ್ಯತೆ ನೀಡಬೇಕಾಯಿತು. ಮಾಜಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿಯವರು ಇದಕ್ಕೆ ಮತ್ತೇ ಚಾಲನೆ ನೀಡಿದರೂ ಕಾಂಗ್ರೆಸ್‌ನವರು ಅಪಹಾಸ್ಯಮಾಡಿ ಜೇನುಗೂಡಿಗೆ ಕೈ ಹಾಕಿದ್ದಾರೆ. ಆದರೆ, ಸಮಾನತೆ ಪ್ರತಿಯೊಬ್ಬರ ಹಕ್ಕು ಎನ್ನುವ ಕಾರಣದಿಂದ ಹಿಡಿದ ಪಟ್ಟು ಬಿಡದೆ ನಮಗೆ ನ್ಯಾಯದೊರಕಿಸಿಕೊಡುವಲ್ಲಿ ಬಿಜೆಪಿ ಬದ್ಧವಾಗಿದ್ದರೆ. ಸಮಾಜಿಕ ನ್ಯಾಯದ ಹೆಸರಿನಲ್ಲಿ ಮತಯಾಚನೆಗೆ ಹೋದ ಕಾಂಗ್ರೆಸ್ ಮತ್ತದೇ ಕೆಲಸಮಾಡಿ ಸಮುದಾ ಯವನ್ನು ಇನ್ನಷ್ಟು ತುಳಿಯುವ ಹುನ್ನಾರ ನಡೆಸಿತ್ತು ಎಂದು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು. ಈಗ ಮೀಸಲಾತಿ ವಿಚಾರವಾಗಿ ರಾಜ್ಯ ಸರ್ಕಾರಕ್ಕೆ ಹಕ್ಕು ನೀಡಿದೆ. ಈಗಲಾದರೂ ತಮ್ಮ ಕರ್ತವ್ಯ ನ್ಯಾಯಸಮ್ಮತವಾಗಿ ನಿರ್ವಹಿಸಲಿ ಎಂದರು.



> ನಮ್ಮ ಸಮುದಾಯದ ಸೌಲಭ್ಯಕ್ಕಾಗಿ ಹೋರಾಟಮಾಡಿದ್ದು, ನಮ್ಮ ಹೋರಾಟ ನ್ಯಾಯಬದ್ಧವಾಗಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದು ಸಂತೋಷದ ವಿಚಾರ. ಯುವಪಿಳಿಗೆಗೆ ಮುಂದಿನ ಭವಿಷ್ಯ ಉತ್ತಮವಾಗಲಿದೆ ಎನ್ನುವ ಭರವಸೆ ನಮಗಿದೆ ಸೌಲಭ್ಯಗಳನ್ನು ಉತ್ತಮವಾಗಿ ಬಳಸಿಕೊಳ್ಳಿ.
> – **ಮರಿಯಪ್ಪ,** ತಾಲೂಕು ಅಧ್ಯಕ್ಷ, ಬಿಜೆಪಿ ಎಸ್.ಸಿ.ಮೋರ್ಚ

ಬಿಜೆಪಿ ಮಂಡಲ ಅಧ್ಯಕ್ಷ ಬೆಣಕಲ್ ಪ್ರಕಾಶ್ ಮಾತನಾಡಿ, ಒಳ ಮೀಸಲಾತಿಗಾಗಿ ನಿಸ್ವಾರ್ಥ ಹೋರಾಟ ಮಾಡಿದ್ದಾರೆ. ಇದಕ್ಕಾಗಿ ಅನೇಕರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಇದಾದ ಬಳಿಕ ಸುಪ್ರೀಂಕೋರ್ಟ್ ಆದೇಶ ನೀಡಿದ್ದು, ಇದರಿಂದ ನಮ್ಮ ಪಕ್ಷದ ನರೇಂದ್ರ ಮೋದಿಯವರಿಂದ ಎಲ್ಲಾ ನಾಯಕರಿಗೂ ಅಭಿನಂದಿಸುತ್ತೇವೆ. ಇನ್ನು ಈ ತೀರ್ಪು ಸಮುದಾಯದ ಮುಂದಿನ ಭವಿಷ್ಯದಲ್ಲಿ ಮಕ್ಕಳಿಗೆ ಅನುಕೂಲವಾಗಲಿದೆ. ಜನಾರ್ಶೀವಾದ ಪಡೆದಿರುವ ಕಾಂಗ್ರೆಸ್ ಸರ್ಕಾರ ಕೂಡಲೆ ಒಳ ಮೀಸಲಾತಿ ಸೌಲಭ್ಯ ಕಲ್ಪಿಸಿಕೊಡವ ಕೆಲಸ ಮಾಡಲಿ ಎಂದು ಆಗ್ರಹಿಸಿದರು.
ಈ ವೇಳೆ ಸಮುದಾಯದ ಮುಖಂಡರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಎಸ್.ಸಿ.ಮೋರ್ಚದ ಉಪಾಧ್ಯಕ್ಷರಾದ ಕೋಗಳಿ ಪ್ರಕಾಶ್, ಶಿವಮೂರ್ತಿ, ಮಾದೂರು ಮಹೇಶ್, ಎ.ಕೆ.ರಾಮಣ್ಣ, ಎಚ್.ಬುಳ್ಳಪ್ಪ, ನಿವೃತ್ತ ಶಿಕ್ಷಕ ಬಸಪ್ಪ, ಅಂಕಸಮುದ್ರ ಮಲ್ಲಿಕಾರ್ಜುನ, ಚಿಲಗೋಡು ಮೈಲಪ್ಪ, ಮಂಜುನಾಥ, ಅರ್ಜುನ, ಮರಿಯಮ್ಮನಹಳ್ಳಿಯ ಗಾಳೆಪ್ಪ, ಸುಬ್ರಮಣ್ಯ, ಆನಂದ ಇತರರಿದ್ದರು.

# 78ನೇ ಸ್ವಾತಂತ್ರ್ಯ ದಿನಾಚರಣೆ ಅರ್ಥಪೂರ್ಣ ಆಚರಣೆಯಾಗಬೇಕು

■ **ಹಂಪಿ ಟೈಮ್ಸ್ ಕೊಪ್ಪಳ**
ಇದೇ ಆಗಸ್ಟ್ 15 ರಂದು ಜಿಲ್ಲಾ ಕೇಂದ್ರದಲ್ಲಿ ಆಚರಿಸಲಾಗುವ 78ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು, ಹಂಚಿಕೆ ಮಾಡಲಾದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದರ ಮೂಲಕ ವ್ಯವಸ್ಥಿತ ಹಾಗೂ ಅರ್ಥಪೂರ್ಣ ಆಚರಣೆಗೆ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಅಧಿಕಾರಿಗಳಿಗೆ ಸೂಚಿಸಿದರು.



ಇದೇ ಆಗಸ್ಟ್ 15 ರಂದು ಜಿಲ್ಲಾ ಕೇಂದ್ರದಲ್ಲಿ ಆಚರಿಸಲಾಗುವ 78ನೇ ಸ್ವಾತಂತ್ರ್ಯ ದಿನಾಚರಣೆ ನಿಮಿತ್ಯ ಶುಕ್ರವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.
ಸ್ವಾತಂತ್ರ್ಯೋತ್ಸವ ದಿನಾಚರಣೆ ನಿಮಿತ್ತ ಆಗಸ್ಟ್ 15ರಂದು ಬೆಳಗ್ಗೆ 08 ಗಂಟೆಗೆ ಜಿಲ್ಲಾಡಳಿತ ಭವನದ ಆವರಣದಲ್ಲಿ ಹಾಗೂ ಅಂದು ಬೆಳಗ್ಗೆ 9 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಿಂದ ಧ್ವಜಾರೋಹಣ ನಡೆಯಲಿದೆ. ಸ್ವಾತಂತ್ರ್ಯೋತ್ಸವ ಹಿನ್ನೆಲೆಯಲ್ಲಿ ರಚಿಸಲ್ಪಟ್ಟ ಸಮಿತಿಗಳು ತಮಗೆ ವಹಿಸಲಾದ ಕರ್ತವ್ಯಗಳನ್ನು ಚಾಚೂ ತಪ್ಪದೇ ಪಾಲಿಸಬೇಕು. ಯಾವುದೇ ನಿಯಮ ಉಲ್ಲಂಘನೆಯಾಗದಂತೆ ಹಾಗೂ ಸರ್ಕಾರದ ಶಿಷ್ಟಾಚಾರ ಪಾಲನೆಯೊಂದಿಗೆ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಹಾಗೂ ಅರ್ಥಪೂರ್ಣವಾಗಿ ಆಯೋಜನೆ ಮಾಡಬೇಕು. ಅಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಜಯಂತಿ ಕೂಡ ಇರುವುದರಿಂದ ಜಿಲ್ಲಾಡಳಿತದಿಂದ ಜಯಂತಿ ಆಚರಣೆಗೆ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದರು.
ಜಿಲ್ಲಾ ಕೇಂದ್ರದ ಪ್ರಮುಖ ರಸ್ತೆಗಳು, ವೃತ್ತಗಳ ಸ್ವಚ್ಛತೆ ಹಾಗೂ ಅಲಂಕಾರ ಹಾಗೂ ಕ್ರೀಡಾಂಗಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ನಗರಸಭೆಯಿಂದ ಕೈಗೊಳ್ಳಬೇಕು. ಮಹತ್ವದ ಈ ಸಂದರ್ಭದಲ್ಲಿ ತಹಶೀಲ್ದಾರರು ಸ್ವಾತಂತ್ರ್ಯ ಯೋಧರು, ಹೋರಾಟಗಾರರ ಮನೆಗೆ ತೆರಳಿ ಸನ್ಮಾನಿಸಬೇಕು. ಜಿಲ್ಲಾ ಮಟ್ಟದ ಎಲ್ಲ ಇಲಾಖೆಗಳ ಅಧಿಕಾರಿಗಳು ತಮ್ಮ ಕುಟುಂಬದೊಂದಿಗೆ ಕಡ್ಡಾಯವಾಗಿ ಧ್ವಜಾರೋಹಣ ಕಾರ್ಯಕ್ರಮಕ್ಕೆ ಹಾಜರಾಗಬೇಕು. ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲೆಯ ಜನರನ್ನುದ್ದೇಶಿಸಿ ಮಾತನಾಡುವರು. ಇದಕ್ಕಾಗಿ ವಿವಿಧ ಇಲಾಖೆಗಳು ಅಗತ್ಯ ಮಾಹಿತಿಯನ್ನು ಸಕಾಲಕ್ಕೆ ನೀಡಬೇಕು ಎಂದು ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.
ಸ್ವಾತಂತ್ರ್ಯೋತ್ಸವ ದಿನಾಚರಣೆ ಅಂಗವಾಗಿ ನಡೆಯುವ ಪಥಸಂಚಲನಕ್ಕೆ ಅಗತ್ಯ ಪೂರ್ವಭಾವಿ ತರಬೇತಿ ನೀಡಬೇಕು. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಮಕ್ಕಳಿಗೆ ಕೆ.ಕೆ.ಎಸ್.ಆರ್.ಟಿ.ಸಿ ಬಸ್ ಸೌಕರ್ಯ ಒದಗಿಸಬೇಕು. ಮಕ್ಕಳಿಗೆ ಹಾಲು ಅಥವಾ ಲಘು ಉಪಹಾರ ವಿತರಣೆಗೆ ಕ್ರಮ ಕೈಗೊಳ್ಳಬೇಕು. ಕ್ರೀಡಾಂಗಣದಲ್ಲಿ ಆರೋಗ್ಯ ಇಲಾಖೆಯಿಂದ ತುರ್ತು ಪರಿಸ್ಥಿತಿ ನಿರ್ವಹಣೆಗಾಗಿ ಅಗತ್ಯ ಸಿಬ್ಬಂದಿಯೊಂದಿಗೆ ಅಂಬ್ಯುಲೆನ್ಸ್, ಅಗ್ನಿಶಾಮಕ ಇಲಾಖೆಯಿಂದ ಅಗ್ನಿಶಾಮಕ ವಾಹನ ಒದಗಿಸಬೇಕು. ಪ್ಲಾಸ್ಟಿಕ್ ಧ್ವಜವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದ್ದು, ಯಾವ ಅಂಗಡಿಗಳಲ್ಲೂ ಪ್ಲಾಸ್ಟಿಕ್ ಧ್ವಜ ಮಾರಾಟವಾಗದಂತೆ ನಗರಸಭೆ ಸೇರಿದಂತೆ ಸ್ಥಳೀಯ ಸಂಸ್ಥೆಗಳು ಕ್ರಮಕೈಗೊಳ್ಳಬೇಕು ಹಾಗೂ ಈ ಬಗ್ಗೆ ಸಾರ್ವಜನಿಕರಿಗೂ ಮಾಹಿತಿ ನೀಡಬೇಕು ಎಂದರು.
ತಾಲೂಕು ಮಟ್ಟದಲ್ಲಿ ಧ್ವಜ ಸಂಹಿತೆಯನ್ನು ಪಾಲಿಸಿ ವ್ಯವಸ್ಥಿತ ಧ್ವಜಾರೋಹಣ ನೆರವೇರಿಸುವಂತೆ ಆಯಾ ತಹಶೀಲ್ದಾರರು ಕ್ರಮ ಕೈಗೊಳ್ಳಬೇಕು. ಸ್ವಾತಂತ್ರ್ಯೋತ್ಸವವನ್ನು ವ್ಯವಸ್ಥಿತ ಆಚರಣೆಗೆ ರಚಿಸಿದ ಸಮಿತಿಗಳು ತಮಗೆ ನೀಡಿದ ನಿರ್ದೇಶನಗಳನ್ವಯ ಕಾರ್ಯ ನಿರ್ವಹಿಸಬೇಕು. ಪಥಸಂಚಲನದಲ್ಲಿ ನಿಗದಿಪಡಿಸಿದ ತಂಡಗಳು ಭಾಗವಹಿಸಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ದೇಶೀ ನೃತ್ಯಕ್ಕೆ ಆದ್ಯತೆ ನೀಡಬೇಕು. ಶಾಲಾ ಮಕ್ಕಳಿಂದ ಸಾಮೂಹಿಕ ನೃತ್ಯ, ಸಾಧಕರಿಗೆ ಸನ್ಮಾನ ಹಾಗೂ ಇತರ ಕಾರ್ಯಕ್ರಮಗಳು ಇದ್ದಲ್ಲಿ ಅಂತಹ ಅಧಿಕಾರಿಗಳು ಜಿಲ್ಲಾಡಳಿತಕ್ಕೆ ಹಾಗೂ ಸಂಬಂಧಪಟ್ಟ ಸಮಿತಿಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು. ಕೊನೆ ಕ್ಷಣದ ಗೊಂದಲಗಳಿಗೆ, ಕಾರ್ಯಕ್ರಮಗಳ ಸೇರ್ಪಡೆಗೆ ಅವಕಾಶವಿಲ್ಲ ಎಂದು ಅವರು ಅಧಿಕಾರಿಗಳಿಗೆ ತಿಳಿಸಿದರು.
ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಸಹಾಯಕ ಆಯುಕ್ತರಾದ ಕ್ಯಾ.ಮಹೇಶ ಮಾಲಗಿತ್ತಿ, ಜಿಲ್ಲಾ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಕೃಷ್ಣಮೂರ್ತಿ ದೇಸಾಯಿ, ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ. ಎಸ್., ಆಯುಷ್ ಅಧಿಕಾರಿ ಡಾ.ಪಿ.ಬಿ ಹಿರೇಗೌಡರ್, ನಗರಸಭೆ ಆಯುಕ್ತರಾದ ಗಣಪತಿ, ತಹಶೀಲ್ದಾರ ವಿಠ್ಠಲ್ ಚೌಗಲಾ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಕರ್ನಾಟಕ ಪಬ್ಲಿಕ್ ಶಾಲೆ

ಎಂದು ಹೇಳಿದರು.
ಶಿಕ್ಷಣದ ಪಾವಿತ್ರ್ಯತೆ ಕಾಪಾಡಲು ಮತ್ತು ವಿದ್ಯಾರ್ಥಿಗಳಿಗೆ ಮುಂದಿನ ಉನ್ನತ ಶಿಕ್ಷಣದಲ್ಲಿ ಯಾವುದೇ ರೀತಿಯ ತಪ್ಪು ಮಾರ್ಗ ಅನುಸರಿಸದಂತೆ, ರಾಜ್ಯದ ಎಲ್ಲಾ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಸಮಯದಲ್ಲಿ ವೆಬ್ ಕಾಸ್ಟಿಂಗ್ ಮಾಡಲಾಗಿದ್ದು, ಈ ಕಾರ್ಯಕ್ಕೆ ಪ್ರಶಂಸನೆ ದೊರಕಿದೆ ಎಂದರು.
ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಬೋಧಕ ಹಾಗೂ ಬೋಧಕೇತರ ಹುದ್ದೆಗಳ ಭರ್ತಿಗೆ ಅಗತ್ಯವಾದ ಅನುದಾನ ನೀಡಲಾಗುತ್ತಿದೆ. ಬಹುತೇಕ ಶಾಲೆಗಳು ಕನ್ನಡ ಮಾಧ್ಯಮದ ಶಾಲೆಗಳಾಗಿದ್ದು, ಸರ್ಕಾರದ ನಿರ್ಧಾರದಿಂದ ಅವುಗಳ ಬಲವರ್ಧನೆಗೆ ಸಹಕಾರಿಯಾಗಲಿದೆ. ರಾಜ್ಯದಲ್ಲಿ ಸುಮಾರು 6 ಸಾವಿರ ಗ್ರಾಮ ಪಂಚಾಯಿತಿ ಗಳಿದ್ದು, ಎರಡು ಗ್ರಾಮ ಪಂಚಾಯಿತಿಗೊಂದರಂತೆ 3 ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಸ್ಥಾಪಿಸಲಾಗುವುದು. ಈ ಬಾರಿ 600 ಶಾಲೆಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ಶಿಕ್ಷಕರ ನೇಮಕಾತಿಗೂ ಕ್ರಮವಹಿಸಲಾಗಿದೆ' ಎಂದು ಶಿಕ್ಷಣ ಸಚಿವರು ಹೇಳಿದರು.
ಈ ಸಂದರ್ಭದಲ್ಲಿ ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಪರ ಆಯುಕ್ತ ಡಾ.ಆಕಾಶ್ ಶಂಕರ್, ಜೆಎಸ್ ಬ್ಲ್ಯೂ ಸಂಸ್ಥೆಯ ಅಧ್ಯಕ್ಷ ಪಿ.ಕೆ.ಮುರುಗನ್, ಜೆಎಸ್‌ಬ್ಲ್ಯೂನ ಸಿಇಒ ಹರ್ಷ ವರ್ಧನ ನವತೆ, ವಡ್ಡು ಗ್ರಾಪಂ ಅಧ್ಯಕ್ಷೆ ಕೆ.ಎಂ.ನಿಂಗಮ್ಮ ನಾಗರಾಜ ಸೇರಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು, ಶಿಕ್ಷಕರು ಉಪಸ್ಥಿತರಿದ್ದರು.

# ದುಶ್ಚಟಗಳಿಂದ ದೂರವಿರಿ ಜೀವನದಲ್ಲಿ ನೆಮ್ಮದಿ ಕಾಣಿ



■ **ಹಂಪಿ ಟೈಮ್ಸ್ ಕೊಟ್ಟೂರು**
ಕೊಟ್ಟೂರು ತಾಲೂಕ ಕಛೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಡಾ.ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆಯ ನಿಮಿತ್ಯ ವ್ಯಸನ ಮುಕ್ತ ದಿನಾಚರಣೆಯನ್ನು ಆಚರಿಸಿದರು.
ನಂತರ ಸರ್ಕಾರಿ ಬಾಲಕರ ಪ್ರೌಢಶಾಲಾ ಮಕ್ಕಳು ಹಾಗೂ ಪೌರ ಕಾರ್ಮಿಕರು ಜತೆಗೆ ಕಂದಾಯ ಇಲಾಖೆ ಸಿಬ್ಬಂದಿ ಸೇರಿ ಉಜ್ಜಿನಿ ಸರ್ಕಲ್ ನಿಂದ ಬಸ್ ನಿಲ್ದಾಣದವರೆಗೆ ಜಾಥವನ್ನು ನಡೆಸಿದರು. ಮದ್ಯಪಾನ, ಮಾದಕ ವಸ್ತು, ತಂಬಾಕು ವಸ್ತುಗಳ ಸೇವನೆಯಿಂದ ಮಾನವನ ದೇಹವಲ್ಲದೇ ಮನಸ್ಸು ಮತ್ತು ಸ್ವಾಸ್ಥ್ಯ ಸಮಾಜ ಅನಾರೋಗ್ಯ ಪೀಡಿತವಾಗುತ್ತದೆ.ಮಾನವನ ಆರ್ಥಿಕ, ಸಾಮಾಜಿಕ ಸ್ಥಿತಿ ಅದೋಗತಿಗೆ ಇಳಿಯುತ್ತದೆ ಎಂದು ವಿವಿಧ ಶ್ಲೋಗನ್ ಗಳ ಹೇಳುವ ಮೂಲಕ ಪಟ್ಟಣದಲ್ಲಿ ಜಾಗೃತಿಯನ್ನು ಮೂಡಿಸಿ,ಪ್ರತಿಜ್ಞಾ ವಿಧಿ ಬೋಧಿಸಿದರು.
ಈ ಸಮಯದಲ್ಲಿ ಅನ್ನದಾನೇಶ ಬಿ ಪತ್ತಾರ್ ಉಪತಹಶೀಲ್ದಾರ್, ರೇಖಾ ಎಸ್ ಶಿರಸ್ತೇದಾರರು, ಎ. ನಸರುಲ್ಲಾ ಮುಖ್ಯಾಧಿಕಾರಿ ಪಟ್ಟಣ ಪಂಚಾಯಿತಿ, ಶಿಕ್ಷಣ ಇಲಾಖೆಯ ನಿಂಗಪ್ಪ ಇಸಿಒ , ಬಿಆರ್ಪಿ ರವೀಂದ್ರ, ಸಿಆರ್ಪಿ ಗಳಾದ ಅಜ್ಜಯ್ಯ ಜಿ, ಕೊಟ್ರೇಶ್, ಮಹಾಂತೇಶ, ವೀರಭದ್ರೇಶ್ವರ ಪ್ರೌಡಶಾಲೆಯ ಮುಖ್ಯಗುರುಗಳಾದ ಕೃಷ್ಣ ಎಸ್, ಶಿವಕುಮಾರ ಡಿ ಕಂದಾಯ ನಿರೀಕ್ಷಕರು, ಹರೀಶ ಗ್ರಾ ಆ ಅ ಹಾಗೂ ಕಛೇರಿ ಸಿಬ್ಬಂದಿ, ಪೊಲೀಸ್ ಸಿಬ್ಬಂದಿ ಪಾಲ್ಗೊಂಡಿದ್ದರು. ಸಿ.ಮ.ಗುರುಬಸವರಾಜ ನಿರ್ವಹಿಸಿದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

**10 ನೇ ತರಗತಿ** **ಹಿಂದಿ**

### अभिनव मनुष्य

**I . अनुरूपता :**
1) मातृभूमि : भगवतीचरण वर्मा ::
अभिनव मनुष्य : ---- (रांधारीसिंह दिनकर)
2) गिरि : पहाड ::वारि :-------- (जल)
3) पवन : वायू :: सिंधु : ----- (सागर)

**II . एक वाक्य में उत्तर लिखिए ।**
4) आज की दुनिया कैसी है ?
आज की दुनिया **विचित्र और नवीन** है ।
5) परमाणु किसे देखकर काँपते हैं ?
परमाणु **मानव की हाथों को** देखकर काँपते हैं । (2022)
6) आज मानव का यान कहाँ जरहा है ?
आज मानव का यान **गगन में** जा रहा है ।
7) पवन का ताप किसके हुक्म पर चढता - उतरता है ? (2019)
पवन का ताप **मानव के** हुक्म पर चढता - उतरता है ।
8) नर किन-किनको एक समान लाँघ सकता है ?
नर **नदी, सागर, पर्वत** आदि को एक समान लाँघ सकता है । ( 2023 )

**II. तीन-चार वाक्यों में उत्तर लिखिए ।**
9) दिनकर जी के अनुसार मानव का सही परिचय क्या है ? ( 2023 )
* दिनकर जी के अनुसार प्रकृति पर विजय प्राप्त करना मनुष्य की साधना नही है ।
* मानव-मानव के बीच स्नेह का बाँध बाँधना मानव की सिद्धी है ।
* जो मानव दूसरे मानव से प्रेम का रिस्ता जोडकर आपस की दूरी मिटाये, वही मानव कहलाने का अधिकारी होगा ।
* यही मानव का सही परिचय है ।

10) 'प्रकृति पर सर्वत्र है विजयी पुरुष आसीन '-इस पंक्ति का आशय क्या है ?
प्रकृति पर सर्वत्र है विजयी पुरुष आसीन '– इस पंक्ति का आशय यह है कि आज मानव ने प्रकृति के हर तत्व पर विजय प्राप्त कर ली है । वारी, विद्युत, भाप आदि मानव के करो में नियंत्रित है ।
11) दिनकर जी ने आधुनिक मानव की भौतिक साधनों का वर्णन कैसे कियाहै ? (2024, 2023 )
* आधुनिक मनुष्य ने प्रकृति के हर तत्व पर विजय पाई है ।
* वारि, विद्युत, भाप इनका नियंत्रण में है ।
* इनका हुक्म पर पवन का ताप चढता और उतरता है ।
* आधुनिक मनुष्य ने नदी, सागर, पर्वत आदि को एक समान लाँघ सकता है ।
* आधुनिक मनुष्य का यान गगन में जा रहा है ।
* यह आधुनिक मनुष्य की भौतिक साधना है ।

**व्याकरण**
1) चढना शब्द का विलोम शब्द है -
A)करना B)उतरना
C) खाना D)चढ
2) नवीन शब्द का विलोम शब्द है -
A)करना B)उतरना
C)प्राचीन D)आधुनिक
3) जीत शब्द का विलोम शब्द है -
A)हार B)जीना
C)जाग D)उठ
4) ज्ञान शब्द का विलोम शब्द है -
A)सुज्ञान B)ज्ञानी
C)पंडित D)अज्ञान
उत्तर : 1) B 2) C 3) A 4) D

www.hampitimes.com - Hampi Times Margadarshi
ನಿನ್ನ ಏಳ್ಗೆಗೆ ನೀನೇ ಶಿಲ್ಪಿ

ಮಾರ್ಗದರ್ಶಿ ಶಿಕ್ಷಕರು : **ಹೆಚ್.ತುಕಾರಾಮ್ ನಾಯ್ಕ,** ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

**ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ**

**CHANGE OF NAME**
I, VIKRAM KUMAR JAIN S/o Mangilal Jain aged about 49 years, R/o H.No.89, 20th ward, Near Jayamma Temple, Jali Lane, Hosapete, Hosapete taluku, Vijayanagara Dist.
I am changing my name to
**VIKRAM KUMAR JAIN**
as earlier name was **Vikram Jain**
Vide affidavit before Notary K.SURABHI DURGA, Hosapete on 2/08/2024

ಹಂಪಿ ಟೈಮ್ಸ್ ಚಾನಲ್
ವಿಜಯನಗರದ ಹೆಮ್ಮೆ
FREE!
hampitimes epaper
save your mobile space !
SCAN QR CODE TO JOIN FOLLOW
HAMPI TIMES
whatsapp channel

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055